ಕನ್ನಡಪ್ರಭ
ಮಂಗಳವಾರ 5.05.2026

ಹೆಚ್ಚಿನ ಸುದ್ದಿ ಪುಟ 13ರಲ್ಲಿ

ಗರಿಷ್ಠ 36°c | ಕನಿಷ್ಠ 25°c

ಸುದ್ದಿ ಸಿಂಚನ

ಪದಾಧಿಕಾರಿಗಳಾಗಿ ಆಯ್ಕೆ

ಎಚ್.ಡಿ. ಕೋಟೆ :ತಾಲೂಕಿನ ಕರುನಾಡ ಜನನಾಯಕ ಕುಮಾರಸ್ವಾಮಿ ಅಭಿಮಾನಿ ಬಳಗದ ನೂತನ ಪದಾಧಿಕಾರಿಗಳನ್ನು ಆಯ್ಕೆ ಮಾಡಲಾಗಿದೆ ಎಂದು ಎಡತೊರೆ ದೇವರಾಜು ತಿಳಿಸಿದರು. ಕಳೆದ ಮೂರು ವರ್ಷದ ಹಿಂದೆ ಕರುನಾಡ ಜನನಾಯಕ ಕುಮಾರಸ್ವಾಮಿ ಅಭಿಮಾನಿ ಬಳಗವನ್ನು ರಚನೆ ಮಾಡಲಾಗಿತ್ತು. ಅಂದು ಅಧ್ಯಕ್ಷರಾಗಿ ಬದನಕುಪ್ಪೆ ರವಿಕುಮಾರ್‌ರವರು ಅವರನ್ನು ಆಯ್ಕೆ ಮಾಡಲಾಗಿತ್ತು. ಆದರೆ ಅಂದಿನ ಅಂಧ್ಯಕ್ಷರು ಸಂಘಟನೆಯಲ್ಲಿ ಪಾಲ್ಗೊಳ್ಳದ ಹಿನ್ನೆಲೆ ನಾವು ನೂತನ ಅಧ್ಯಕ್ಷರು ಮತ್ತು ಪದಾಧಿಕಾರಿಗಳನ್ನು ಆಯ್ಕೆ ಮಾಡಿದ್ದೇವೆ ಎಂದು ಸುದ್ದಿಗೋಷ್ಠಿಯಲ್ಲಿ ಅವರು ತಿಳಿಸಿದರು. ಅಧ್ಯಕ್ಷರಾಗಿ ಎಚ್.ಎ. ರಮೇಶ್, ಉಪಾಧ್ಯಕ್ಷರಾಗಿ ಎಚ್.ಪಿ. ಚಲುವರಾಜು, ಡಿ.ಟಿ. ಮಂಜುನಾಥ್, ಪ್ರಧಾನ ಕಾರ್ಯದರ್ಶಿ ಸಿ.ಎಸ್. ಶ್ರೀನಿವಾಸ, ಖಜಾಂಚಿಯಾಗಿ ಸಿ.ಆರ್. ಜಗದೀಶ್, ಗೌರವಾಧ್ಯಕ್ಷರಾಗಿ ಜಿ.ಕೆ. ಕೆಂಪರಾಜು, ಸಂಘಟನಾ ಕಾರ್ಯದರ್ಶಿಯಾಗಿ ಮಂಜೇಗೌಡ, ಕಾರ್ಯಾಧ್ಯಕ್ಷರಾಗಿ ದೇವರಾಜು, ಸಹ ಕಾರ್ಯದರ್ಶಿಯಾಗಿ ಬಾಲಕೃಷ್ಣ, ಮಾಧ್ಯಮ ಸಲಹೆಗಾರರಾಗಿ ಸಿದ್ದಲಿಂಗೇಗೌಡ ಆಯ್ಕೆಯಾದರು.

ಹಲವೆಡೆ ವಿದ್ಯುತ್ ವ್ಯತ್ಯಯ

ಮೈಸೂರು: ವಿ.ವಿ ಮೊಹಲ್ಲಾ ವಿಭಾಗ ವ್ಯಾಪ್ತಿಯ 66/11 ಕೆ.ವಿ ಆರ್.ಕೆ. ನಗರ ವಿದ್ಯುತ್ ವಿತರಣಾ ಕೇಂದ್ರದಲ್ಲಿ 1ನೇ ತ್ರೈಮಾಸಿಕ ನಿರ್ವಹಣಾ ಕೆಲಸದ ನಿಮಿತ್ತ ಮೇ 5 ರ ಬೆಳಗ್ಗೆ 10 ರಿಂದ ಸಂಜೆ 6ರವರೆಗೆ ಈ ಕೆಳಕಂಡ ಪ್ರದೇಶ ಗಳಿಗೆ ವಿದ್ಯುತ್ ಸರಬರಾಜಿನಲ್ಲಿ ವ್ಯತ್ಯಯ ವಾಗಲಿದೆ. ತೋಣಚಿಕೊಪ್ಪಲು, ಹರಿಹರ ಹೋಟೆಲ್, ಅಮ್ಮ ಕಾಂಪ್ಲೆಕ್ಸ್, ನ್ಯೂಕಾಂತರಾಜಅರಸ್‌ರಸ್ತೆ, ಆರ್.ಟಿ.ಟಿ.ಸಿ ಕಾಂಪ್ಲೆಕ್ಸ್, ಅರವಿಂದನಗರ, ಕುವೆಂಪುನಗರ ಎಂ ಬ್ಲಾಕ್, ಎನ್ ಬ್ಲಾಕ್, ಕೆ ಬ್ಲಾಕ್, ಕುವೆಂಪುನಗರ ಕೆ.ಹೆಚ್.ಬಿ ಕಾಲೋನಿ, ಅನಿಕೇತನರಸ್ತೆ, ಪಡುವಣರಸ್ತೆ, ಸರಸ್ವತಿಪುರಂ 1 ರಿಂದ 4ನೇ ಮುಖ್ಯರಸ್ತೆ, ವಿಶ್ವಮಾನವಜೋಡಿರಸ್ತೆ, ಪಂಚಮಂತ್ರ ರಸ್ತೆ, ಎಂ ಬ್ಲಾಕ್ ಲೈಬ್ರರಿ, ಪಾಂಡುರಂಗ ದೇವಸ್ಥಾನ, ವಿವೇಕಾನಂದ ವೃತ್ತ, ವಿವೇಕಾನಂದನಗರ, ಇ. ಡಬ್ಲ್ಯೂ.ಎಸ್‌ಗಣಪತಿದೇವ ಸ್ಥಾನ, ಎಂ.ಎಲ್.ಎ ವಿಶ್ವ ನಾಥ್ ಮನೆ ಸುತ್ತಮುತ್ತ, ಕೆನರಾ ಬ್ಯಾಂಕ್, ಬಿ.ಜಿ.ಎಸ್ ಬಾಲ ಜಗನ್ನಾಥ ಶಾಲೆ, ಎಸ್.ಬಿ.ಎಂ ಕಾಲೋನಿ, ಶಿವ ಟೆಂಪಲ್, ಸೂರ್ಯ ಲೇಔಟ್, ನಿಮಿಷಾಂಬ ಲೇಔ ಟ್, ಕಂದಾಯನಗರ 3ನೇ ಹಂತ, ಗಿರಿಯಪ್ಪ ನಿಂಗೇ ಗೌಡ ಲೇಔಟ್, ಟೆಂಪಲ್ ಬೆಲ್ ಲೇಔಟ್, ಮಹಾ ಲಿಂಗೇಶ್ವರ ದೇವಸ್ಥಾನ, ಕಬಿನಿ ಲೇಔಟ್, ಎಸ್.ಎಂ.ಎಸ್. ಸ್ಕೂಲ್ ಲೇಔಟ್. ಕಂದಾ ಯ ಲೇಔಟ್, ಹಂಸ ಲೇಔಟ್ 1ನೇ ಹಂತ, ಗಗನ ಶೇಖರ ಲೇಔಟ್, ಹುಲಿನಾರಾಯ ಣಪ್ಪ ಲೇಔಟ್, ಭವ್ಯ ಭಾರತಿ ಲೇಔ ಟ್, ಎಂ.ಡಿ.ಸಿ.ಸಿ ಬ್ಯಾಂಕ್ ಎಂಪ್ಲಾ ಯಿಸ್ ಲೇಔಟ್, ಟಿ.ಕೆ ಸ್ಟುಡಿಯೋ ಲೇಔಟ್, ಕಂದಾ ಯ ಲೇಔಟ್ 2ನೇ ಹಂತ, ತಪೋವನ, ಅನ್ನಪೂರ್ಣ ಲೇಔಟ್, ಎಂ.ಡಿ.ಸಿ.ಸಿ ಲೇಔಟ್, ಶ್ರೀರಾಂ ಪುರ, ಪ್ರೀತಿ ಲೇಔಟ್, ಡಿ.ವಿ.ಜಿ ಲೇಔಟ್, ಟಿ.ಕೆರಾಮ್ ಲೇಔಟ್, ಚಿದಾನಂದ ಮತ್ತುರಕ್ಷಾ ಲೇಔಟ್, ಆರ್.ಕೆ ನಗರ ಕೆ ಬ್ಲಾಕ್, ವಾಸು ಲೇಔಟ್, ಮುಡಾ ಎಂಪ್ಲಾಯಿ ಸ್ ಲೇಔಟ್, ಮಾಧವ ಪಾರ್ಕ್, ಇ ಮತ್ತುಎಫ್ ಬ್ಲಾಕ್, ಜನತಾನಗರ, ಶಾರಾದಾದೇವಿನಗರ, ನಿವೇದಿತಾನಗರ, ಬಸವೇಶ್ವರನಗರ, ಗಂಗೋತ್ರಿ ಹುಡ್ಕೋ ಲೇಔಟ್, ಸಬ್‌ರಿಜಿಸ್ಟಾರ್‌ಆಫೀಸ್ ಹಾಗೂ ಸುತ್ತಮುತ್ತಲಿನ ಪ್ರದೇಶಗಳು.

ಕಬಿನಿ ಜಲಾಶಯ ನೀರಿನ ಮಟ್ಟ	
ಇಂದಿನ ಮಟ್ಟ	2256.92 (6.23)
ಒಳಹರಿವು	110 ಕ್ಯುಸೆಕ್
ಹೊರಹರಿವು	700 ಕ್ಯುಸೆಕ್
ಗರಿಷ್ಠ ಮಟ್ಟ	2284 ಅಡಿ



ದೇಶದ ಮೂರು ರಾಜ್ಯಗಳಲ್ಲಿ ಬಿಜೆಪಿ ಜಯಭೇರಿ ಬಾರಿಸಿದ ಹಿನ್ನೆಲೆ ಎಚ್.ಡಿ. ಕೋಟೆ ತಾಲೂಕಿನ ಬಿಜೆಪಿ ಮುಖಂಡರು ಪಟಾಕಿ ಸಿಡಿಸಿ, ಸಿಹಿ ವಿತರಿಸಿ, ಸಂಭ್ರಮಿಸಿದರು.



ಮೈಸೂರು ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತು ವತಿಯಿಂದ ಹವ್ಯಾಸಿ ರಂಗಭೂಮಿಯಲ್ಲಿ ಕಳೆದ ಮೂರು ದಶಕಗಳಿಂದ ಕೆಲಸ ಮಾಡುತ್ತಾ ಬಂದಿರುವ ನಟ, ನಿರ್ದೇಶಕ, ಸಂಘಟಕ ದಿನೇಶ್ ಚಮ್ಮಾಳಿಗೆ ಅವರನ್ನು ಕುಟುಂಬದವರೊಟ್ಟಿಗೆ ಸನ್ಮಾನಿಸಲಾಯಿತು. ಕಸಾಪ ಜಿಲ್ಲಾಧ್ಯಕ್ಷ ಮಡ್ಡಿಕೆರೆ ಗೋಪಾಲ್, ರಂಗಕರ್ಮಿ ರಾಜಶೇಖರ ಕದಂಬ, ಲತಾ ಮೋಹನ್ ಇದ್ದಾರೆ.



ಎಳನೀರು, ಹಣ್ಣು ವಿತರಿಸಿ ಬುದ್ಧ ಜಯಂತಿ

• **ಕನ್ನಡಪ್ರಭ ವಾರ್ತೆ** ಮೈಸೂರು

ನಗರದ ಶ್ರೀರಾಂಪುರದಲ್ಲಿರುವ ಬೆಳಕು ವಾತ್ಸಲ್ಯ ಧಾಮದ ಹಿರಿಯ ನಾಗರಿಕ ಬಂಧುಗಳಿಗೆ ಎಸ್. ಪ್ರಕಾಶ್ ಪ್ರಿಯಾದರ್ಶನ ಸ್ನೇಹ ಬಳಗದ ವತಿಯಿಂದ ಎಳನೀರು, ಡ್ರೈ ಫ್ರೂಟ್ಸ್, ಹಣ್ಣು ವಿತರಿಸುವ ಮೂಲಕ ಬುದ್ಧ ಜಯಂತಿ ಆಚರಿಸಲಾಯಿತು.

ಜೆಡಿಎಸ್ ಮುಖಂಡ ಎಸ್. ಪ್ರಕಾಶ್ ಪ್ರಿಯಾದರ್ಶನ, ಪತ್ರಿಕಾ ವಿತರಕರ ಕ್ಷೇಮಾಭಿವೃದ್ಧಿ ಸಂಘದ ಅಧ್ಯಕ್ಷ ಹೋಮ ದೇವ್, ವಾತ್ಸಲ್ಯ ಸೇವಾ ಫೌಂಡೇಶನ್ ಸಂಸ್ಥಾಪಕ ರವಿಕುಮಾರ್, ಬ್ಲಡ್ ಆನ್ ಕಾಲ್ ಕ್ಲಬ್ ಸಂಸ್ಥಾಪಕ ದೇವೇಂದ್ರ ಪರಿಹಾರಿಯಾ, ಮುಖಂಡರಾದ ವಿದ್ಯಾ, ಅಶ್ವಿನಿ, ಪುರು ಷೋತ್ತಮ್, ಯಶ್ವಂತ್ ಕುಮಾರ್, ರಾಜೇಶ್ ಕುಮಾರ್, ಮ ಹೇಶ, ದತ್ತ, ನಿರೀಕ್ಷಿತ್ ಮೊದಲಾದವರು ಇದ್ದರು.

ಸಮಗ್ರ ಅಭಿವೃದ್ಧಿಗೆ ಕಂಕಣಬದ್ಧ

ಶಾಸಕ ಡಿ.ರವಿಶಂಕರ್ | ಮುಖ್ಯರಸ್ತೆಗಳ ಕಾಂಕ್ರಿಟೀಕರಣ ಕಾಮಗಾರಿಗೆ ಚಾಲನೆ

• **ಕನ್ನಡಪ್ರಭ ವಾರ್ತೆ** ಕೆ.ಆರ್. ನಗರ

ನಮ್ಮ ವಿಧಾನಸಭಾ ಕ್ಷೇತ್ರದಲ್ಲಿ ಕೆ.ಆರ್. ನಗರ ಮತ್ತು ಸಾಲಿಗ್ರಾಮ ತಾಲೂಕು ಕೇಂದ್ರಗಳಾಗಿದ್ದು, ಎರಡು ಪಟ್ಟಣಗಳನ್ನು ಸಮಗ್ರವಾಗಿ ಅಭಿವೃದ್ಧಿ ಮಾಡಲು ನಾನು ಕಂಕಣಬದ್ಧನಾಗಿದ್ದೇನೆ ಎಂದು ಶಾಸಕ ಡಿ. ರವಿಶಂಕರ್‌ಹೇಳಿದರು.

ಪಟ್ಟಣ ಸಾರಿಗೆ ಸಂಸ್ಥೆಯ ಬಸ್ ನಿಲ್ದಾಣದಲ್ಲಿ ಮೈಸೂರು ಕಡೆಗೆ ತೆರಳುವ ಪ್ರಯಾಣಿಕರಿಗೆ ಹೈಟೆಕ್ ತಂಗುದಾಣದ ಮತ್ತು ಬಸ್ ನಿಲ್ದಾಣದ ಎರಡು ಮುಖ್ಯರಸ್ತೆಗಳ ಕಾಂಕ್ರಿಟೀಕರಣ ಕಾಮಗಾರಿಗೆ ಚಾಲನೆ ನೀಡಿ ಅವರು ಮಾತನಾಡಿರು.

ಎರಡು ಬದಿಯ ರಸ್ತೆ ಹಾಗೂ ತಂಗುದಾಣವನ್ನು 1.30 ಲಕ್ಷ ರು. ಗಳಲ್ಲಿ ಕಾಮಗಾರಿ ಕೈಗೆತ್ತಿಕೊಳ್ಳಲಾಗಿದೆ ಎಂದರು. ಸರ್ಕಾರ ಶಕ್ತಿ ಯೋಜನೆ ಜಾರಿಗೆ ತಂದ ನಂತರ ಮಹಿಳಾ ಪ್ರಯಾಣಿಕರು ಹೆಚ್ಚಾಗಿ ಓಡಾಡುತ್ತಿರುವುದರಿಂದ ಬಸ್‌ಗಳ ಕೊರತೆ ಇದ್ದು ಹೆಚ್ಚು ಬಸ್‌ಗಳನ್ನು ನೀಡುವಂತೆ ಸಾರಿಗೆ ಸಚಿವರಿಗೆ ಮನವಿ ಸಲ್ಲಿಸಿದ್ದು ಸರ್ಕಾರ ಶೀಘ್ರದಲ್ಲಿ ಹೊಸ ಬಸ್‌ಗಳ ಖರೀದಿ ಮಾಡಲು ಮುಂದಾಗಿರುವುದರಿಂದ ಆಗಾ ಕೆ.ಆರ್. ನಗರಕ್ಕೆ ಹೆಚ್ಚು ಬಸ್‌ಗಳನ್ನು ನೀಡುವಂತೆ ಕೋರಲಾಗಿದೆ ಎಂದು ಮಾಹಿತಿ ನೀಡಿದರು.



ಪುರಸಭೆ ಮಾಜಿ ಅಧ್ಯಕ್ಷ ಕೆ.ಜಿ. ಸುಬ್ರಮಣ್ಯ, ಶಿವುನಾಯಕ್, ಪ್ರಕಾಶ್, ಸೈಯದ್ ಸಿದ್ದಿಕ್, ನಗರ ಕಾಂಗ್ರೆಸ್ ಅಧ್ಯಕ್ಷ ಎಂ.ಜೆ. ರಮೇಶ್, ಗ್ಯಾರಂಟಿ ಅನುಷ್ಠಾನ ಸಮಿತಿ ಅಧ್ಯಕ್ಷ ಎಂ.ಎಸ್. ಮಹದೇವ್ ಮಾತನಾಡಿದರು.

ನಗರ ಯೋಜನಾ ಪ್ರಾಧಿಕಾರದ ನಿರ್ದೇಶಕರಾದ ಕೆ.ಎನ್. ಪ್ರಸನ್ನಕುಮಾರ್, ಸವಿತಾಜವರಪ್ಪ, ಪುರಸಭೆ ಮಾಜಿ ಸದಸ್ಯರಾದ ನಟರಾಜು, ಶಂಕರಸ್ವಾಮಿ, ಶಂಕರ್, ಮಾಜಿ ಸದಸ್ಯ ಕೆ. ವಿನಯ್, ಸಾರಿಗೆ ಸಂಸ್ಥೆಯ ವ್ಯವಸ್ಥಾಪಕ ಕುಮಾರ್, ಮುಖಂಡರಾದ ನವೀದ್, ಜಯಣ್ಣ, ಸಿ. ಶಂಕರ್‌ಇದ್ದರು.

ಜೆ.ಕೆ. ಗ್ರೂಪ್ಸ್‌ಗೆ ಅಶೋಕಪುರಂ ಪ್ರೀಮಿಯರ್ ಲೀಗ್ ಕ್ರಿಕೆಟ್ ಕಪ್

• **ಕನ್ನಡಪ್ರಭ ವಾರ್ತೆ** ಮೈಸೂರು

ಅಶೋಕಪುರಂ ಮಹದೇಶ್ವರ ಯೂತ್ ವತಿಯಿಂದ ಶ್ರೀ ನಾಲ್ವಡಿ ಕೃಷ್ಣರಾಜ ಒಡೆಯರ್‌ಕ್ರೀಡಾಂಗಣ (ಎನ್‌ಐಇ) ದಲ್ಲಿ ಜರುಗಿದ ಅಶೋಕಪುರಂ ಲೀಗ್ 2026 ಕ್ರಿಕೆಟ್ ಟೂರ್ನಿಯಲ್ಲಿ ಜೆ.ಕೆ. ಗ್ರೂಪ್ಸ್ ತಂಡವು 1 ಲಕ್ಷ ಬಹುಮಾನ ಮತ್ತು ಆಕರ್ಷಕ ಟ್ರೋಫಿಯೊಂದಿಗೆ ಪ್ರಥಮ ಬಹುಮಾನ ಪಡೆದಿದೆ.

ಎಪಿ ಥಂಡರ್ಸ್ ತಂಡಕ್ಕೆ ದ್ವಿತೀಯ ಬಹುಮಾನ 50 ಸಾವಿರ ರೂ. ಬಹುಮಾನ ಮತ್ತು ಆಕರ್ಷಕ ಟ್ರೋಫಿ ಮತ್ತು ಎಪಿ ಪ್ಯಾಂಥರ್ಸ್ ತಂಡಕ್ಕೆ ತೃತೀಯ ಬಹುಮಾನ 25 ಸಾವಿರ ರೂ. ಬಹುಮಾನ ಮತ್ತು ಆಕರ್ಷಕ ಟ್ರೋಫಿಯನ್ನು ವಿತರಿಸಲಾಯಿತು.

ಮಾಜಿ ಶಾಸಕ ಎಂ.ಕೆ. ಸೋಮಶೇಖರ್‌ಅವರು ವಿಜೇತ ತಂಡಗಳಿಗೆ ಟ್ರೋಫಿಯನ್ನು ವಿತರಿಸಿದರು. ಮಾಜಿ ಮೇಯರ್‌ಪುರುಷೋತ್ತಮ್, ಮುಖಂಡರಾದ ಆರ್.ಸಿ. ಜೋಗಿ ಮಹೇಶ್, ಪಿ.ಟಿ. ಕೃಷ್ಣ, ಗುರು, ಹರಿದಾಸ್, ಆದರ್ಶ ಭೀಮ್, ಮನು, ನಾಗೇಂದ್ರ, ಹರಿ, ಚೇತನ್ ಮೊದಲಾದವರು ಇದ್ದರು.



100 ದಿನದ ಹ್ಯಾಂಡಲ್ ಎಕ್ಸ್‌ರೇ ಅಭಿಯಾನದ ಕಾರ್ಯಕ್ರಮ

• **ಕನ್ನಡಪ್ರಭ ವಾರ್ತೆ** ಹ್ಯಾಂಡ್ ಪೋಸ್ಟ್

ಪ್ರಾಥಮಿಕ ಆರೋಗ್ಯ ಕೇಂದ್ರದಲ್ಲಿ ಕ್ಷಯ ರೋಗ ನಿಯಂತ್ರಣ ಕಾರ್ಯಕ್ರಮದಲ್ಲಿ ಅಡಿಯಲ್ಲಿ 100 ದಿನದ ಹ್ಯಾಂಡಲ್ ಎಕ್ರೇ ಅಭಿಯಾನದ ಕಾರ್ಯಕ್ರಮ ಟಿಎಚ್‌ಒ ಡಾ. ರವಿಕುಮಾರ್ ಉದ್ಘಾಟಿಸಿದರು.


ನಂತರ ಅವರು ಮಾತನಾಡಿ. 100 ದಿನದ ಹ್ಯಾಂಡಲ್ ಎಕ್ರೇ ಅಭಿಯಾನದ ಅಡಿಯಲ್ಲಿ ಈ ದಿನ ಮಾದಾಪುರ ಪ್ರಾಥಮಿಕ ಆರೋಗ್ಯ ಕೇಂದ್ರದಲ್ಲಿ ಉಚಿತವಾಗಿ ಹ್ಯಾಂಡಲ್ ಎಕ್ಸ್ ರೇ ಯನ್ನು ಮಾಡುತ್ತಿದ್ದೇವೆ, ಈ ಕಾರ್ಯಕ್ರಮದ ಉದ್ದೇಶ ಬೇಗ ಕ್ಷಯ ರೋಗ ಪತ್ತೆ ಹಚ್ಚಿ ಚಿಕಿತ್ಸೆ ನೀಡುವ ಕಾರ್ಯಕ್ರಮವಾಗಿದೆ. ಈಗ ಕ್ಷಯ ರೋಗ ಚಿಕಿತ್ಸೆ ಪಡೆಯುತ್ತಿರುವ ರೋಗಿಗಳ ಸಂಪರ್ಕದಲ್ಲಿರುವ ವ್ಯಕ್ತಿಗಳಿಗೆ, ಅಪಾಯಕಾರಿ ಪ್ರದೇಶದಲ್ಲಿರುವ ಜನರಿಗೆ ಉಚಿತವಾಗಿ ಎಕ್ರೇ ಯನ್ನು ಮಾಡುತ್ತಿದ್ದೇವೆ ಎಂದರು.



ಮಾದಾಪುರ ಗ್ರಾಮದ ಮತ್ತು ಅಕ್ಕಪಕ್ಕದ ಗ್ರಾಮದ ಜನರು ಬಂದು ಈ ಕಾರ್ಯಕ್ರಮವನ್ನು ಸದುಪಯೋಗ ಪಡಿಸಿಕೊಳ್ಳಬೇಕೆಂದು ಅವರು ತಿಳಿಸಿದರು. ಪ್ರಾಥಮಿಕ ಆರೋಗ್ಯ ಕೇಂದ್ರದ ವೈದ್ಯಾಧಿಕಾರಿ ಡಾ. ಚಂದ್ರಕಲಾ ಮಾತನಾಡಿ, ಮೊಟ್ಟ ಮೊದಲ ಬಾರಿಗೆ ಮಾದಾಪುರ ಗ್ರಾಮದಲ್ಲಿ ಉಚಿತವಾಗಿ ಹ್ಯಾಂಡಲ್ ಎಕ್ರೇ ಯನ್ನು ಮಾಡುತ್ತಿದ್ದೇವೆ, ತಾಲೂಕು ಮಟ್ಟದಿಂದ ಸಿಬ್ಬಂದಿ ವರ್ಗದವರು ಬಂದು ಕಾರ್ಯಕ್ರಮವನ್ನು ಮಾಡುತ್ತಿದ್ದಾರೆ, ಆದ್ದರಿಂದ ಸುತ್ತಮುತ್ತಲಿನ ಗ್ರಾಮದ ಎಲ್ಲ ಜನರು ಬಂದು ಕಾರ್ಯಕ್ರಮವನ್ನು ಯಶಸ್ವಿಗೊಳಿಸಬೇಕೆಂದು ತಿಳಿಸಿದರು.

ರೇಡಿಯೋಲಜಿ ಇಮೇಜಿಂಗ್ ಅಧಿಕಾರಿಗಳಾದ ಮಹೇಶ್, ಸುಮಾ, ಕ್ಷಯ ರೋಗ ಮೇಲ್ವಿಚಾರಕರಾದ ನಾಗ ರಾಜು, ಉಮೇಶ್, ಹಿರಿಯ ಆರೋಗ್ಯ ನಿರೀಕ್ಷಣಾಧಿಕಾರಿ ರವಿರಾಜ್, ಪ್ರಾಥ ಮಿಕ ಆರೋಗ್ಯ ಕೇಂದ್ರದ ಸಿಬ್ಬಂದಿ ವರ್ಗದವರು, ಆಶಾ ಕಾರ್ಯಕರ್ತರು, ಸಾರ್ವಜನಿಕರು ಇದ್ದರು.

ವಿರಕ್ತ ಮಠದ ಉತ್ತಾರಾಧಿಕಾರಿಯಾಗಿ ಮೃತ್ಯುಂಜಯ ಸ್ವಾಮೀಜಿ ಆಯ್ಕೆ



• **ಕನ್ನಡಪ್ರಭ ವಾರ್ತೆ** ಸಾಲಿಗ್ರಾಮ

ತಾಲೂಕಿನ ಎಲೆಮುದ್ದನಹಳ್ಳಿ ಶ್ರೀ ವಿರಕ್ತ ಮಠದ ನೂತನ ಉತ್ತರಾಧಿಕಾರಿಯಾಗಿ ಮೃತ್ಯುಂಜಯ ಸ್ವಾಮಿಯವರನ್ನು ಆಯ್ಕೆ ಮಾಡಲಾಗಿದೆ.

ಮಠದ ಆವರಣದಲ್ಲಿ ಸೋಮವಾರ ನಡೆದಕಾರ್ಯಕ್ರಮದಲ್ಲಿಎಲೆಮುದ್ದನಹಳ್ಳಿ ಹಾಗೂ ಕುಶಾಲನಗರ ತಾಲೂಕು ತೊರೆನೂರು ಶ್ರೀ ಮರುಳ ಸಿದ್ದೇಶ್ವರ ವಿರಕ್ತ ಮಠದ ಪೀಠಾಧ್ಯಕ್ಷರಾದ ಶ್ರೀ ಮಲ್ಲೇಶ ಸ್ವಾಮಿ ಅವರ ಉಪಸ್ಥಿತಿಯಲ್ಲಿ ನಂಜನಗೂಡು ತಾಲೂಕು ಕಣೆನೂರು ಗ್ರಾಮ ನಿವಾಸಿಗಳಾದ ಪೂರ್ಣಿಮಾ ಹಾಗೂ ಸರ್ವೇಶ್ ಮೂರ್ತಿ ಅವರ ಪುತ್ರ.

ಮೃತ್ಯುಂಜಯ ಸ್ವಾಮಿ ಅವರನ್ನು ಉತ್ತರಾಧಿಕಾರಿಯನ್ನಾಗಿ ಘೋಷಣೆ ಮಾಡಲಾಯಿತು.

ಸರಗೂರು ಪಡುವಲ ವಿರಕ್ತ ಮಠದ ಮಹದೇವ ಸ್ವಾಮೀಜಿ, ಎಚ್.ಡಿ. ಕೋಟೆ ತಾಲೂಕು ಪುರ ಶ್ರೀ ಬಸವೇಶ್ವರ ಪಟ್ಟದಮಠದ ಚಂದ್ರಶೇಖರ ಸ್ವಾಮೀಜಿ, ಕರ್ಪೂರವಳ್ಳಿ ಶ್ರೀ ಜಂಗಮ ಮಠದ ಶ್ರೀ ಅಭಿನವ ಚಂದ್ರಶೇಖರ ಶಿವಾಚಾರ್ಯ ಸ್ವಾಮೀಜಿ, ಶಾಸಕ ಡಿ. ರವಿಶಂಕರ್, ಗ್ರಾಮದ ಮುಖಂಡರು ಇದ್ದರು.

ಧಗ್ರಾಯೋದಿಂದ ಸಿಹಳ್ಳಿಯಲ್ಲಿ ನಮ್ಮ ನಮ್ಮ ಕೆರೆ ಭೂಮಿ ಪೂಜೆ



• **ಕನ್ನಡಪ್ರಭ ವಾರ್ತೆ** ಮೂಗೂರು

ಗ್ರಾಮದ ವಲಯದ ಸಿಹಳ್ಳಿ ಕಾರ್ಯಕ್ಷೇತ್ರದಲ್ಲಿ ಶ್ರೀ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆ ವತಿಯಿಂದ ನಮ್ಮೂರು ನಮ್ಮ ಕೆರೆ ಕಾರ್ಯಕ್ರಮದ ಭೂಮಿ ಪೂಜೆ ಮಾಡುವ ಮೂಲಕ ನರೇವೇರಿಸಲಾಯಿತು

ಮೈಸೂರು ಜಿಲ್ಲಾ ಜನಜಾಗೃತಿ ವೇದಿಕೆ ಅಧ್ಯಕ್ಷ ಪ್ರಭುಸ್ವಾಮಿ, ಮೈಸೂರು ಕಬ್ಬು ಬೆಳೆಗಾರ ಸಂಘದ ಅಧ್ಯಕ್ಷರು ಶಂಕರ್ ಹಾಗೂ ಕಾರ್ಯದರ್ಶಿ ಕಿರಗಸೂರು ಪ್ರಸಾದ್ ತಾಲೂಕು ಯೋಜನಾಧಿಕಾರಿ ನಾಗೇಶ್ ನಾಯಕ್ ಹಾಗೂ ಮೈಸೂರು ಪ್ರಾದೇಶಿಕ ಕೆರೆ ಎಂಜಿನಿಯರ್ ಪುಷ್ಪರಾಜ್, ಕೆರೆ ಸಮಿತಿ ಅಧ್ಯಕ್ಷ ಗುರುಮೂರ್ತಿ ಕಾರ್ಯಕ್ರಮದ ಭೂಮಿಯ ಪೂಜೆ ನೆರವೇರಿಸಿದರು.

ತಾಲೂಕು ಯೋಜನಾಧಿಕಾರಿ ನಾಗೇಶ್ ನಾಯಕ್ ಮಾತನಾಡಿದರು. ಕೆರೆ ಸಮಿತಿ ಉಪಾಧ್ಯಕ್ಷರು ತಾಂಡವಮೂರ್ತಿ ಹಾಗೂ ವಲಯದ ಮೇಲ್ವಿಚಾರಕರಿ ಕುಮಾರಿ,ತಾಲೂಕು ಕೃಷಿ ಮೇಲ್ವಿಚಾರಕರು ಶಿವಶಂಕರ, ಸೇವಾಪ್ರತಿನಿಧಿ ಮಮತ ಹಾಗೂ ಸ್ವ ಸಹಾಯ ಸಂಘದ ಸದಸ್ಯರು, ಕೆರೆ ಸಮಿತಿ ಸದಸ್ಯರು, ಮಹಾದೇವಸ್ವಾಮಿ ಗ್ರಾಮ ಮುಖಂಡರು ಹಾಗೂ ಗ್ರಾಮಸ್ಥರು ಇದ್ದರು.

ಬಸವಣ್ಣನವರ ಜೀವನ ನಮ್ಮ ಬದುಕಾಗಲಿ ಎಂದು ಸಂಕಲ್ಪಿಸೋಣ

ಮೈಸೂರು ಕುಂದೂರು ಮಠದ ಡಾ.ಶರತ್ ಚಂದ್ರ ಸ್ವಾಮಿ



• **ಕನ್ನಡಪ್ರಭ ವಾರ್ತೆ** ಟಿ. ನರಸೀಪುರ

ಬಸವಣ್ಣನವರ ಜೀವನ ನಮ್ಮ ಬದುಕಾಗಲಿ ಎಂಬುದು ನಮ್ಮ ಸಂಕಲ್ಪವಾಗಬೇಕು ಎಂದು ಮೈಸೂರು ಕುಂದೂರು ಮಠದ ಡಾ.ಶರತ್ ಚಂದ್ರ ಸ್ವಾಮಿ ಹೇಳಿದರು.

ಶ್ರೀ ಶಿವಕುಮಾರ ಮಹಾಸ್ವಾಮಿಗಳವರ ಸೇವಾ ಟ್ರಸ್ಟ್ ನಿಂದದ ಪಟ್ಟಣದ ವಿದ್ಯೋದಯ ಕಾಲೇಜು ಸಭಾಂಗಣದಲ್ಲಿ ಸೋಮವಾರ ಆಯೋಜಿಸಿದ್ದ ಸಾಂಸ್ಕೃತಿಕ ನಾಯಕ, ವಿಶ್ವಗುರು ಶ್ರೀ ಬಸವೇಶ್ವರ ಜಯಂತಿ ಮಹೋತ್ಸವ ಹಾಗೂ ಡಾ.ಶ್ರೀ ಶಿವಕುಮಾರ ಮಹಾಸ್ವಾಮಿಗಳವರ 119 ನೇ ಜಯಂತಿ ಮಹೋತ್ಸವ ಕಾರ್ಯಕ್ರಮದಲ್ಲಿ ವಿಶೇಷ ಉಪನ್ಯಾಸ ನೀಡಿ ಅವರು ಮಾತನಾಡಿದರು.

ಸರಳವಾದರೂ ಅತ್ಯಂತ ಗಂಭೀರವಾದ ಸತ್ಯವಾಗಿದೆ ಮಾತಿನಲ್ಲಿ ಅಲ್ಲ, ಬದುಕಿನಲ್ಲಿ ಧರ್ಮ ಇರಬೇಕು. ಆದ್ದರಿಂದಲೇ ಬಸವಣ್ಣನವರ ಜೀವನ ನಮ್ಮ ಬದುಕಾಗಲಿ ಎಂಬುದು ನಮ್ಮ ಸಂಕಲ್ಪವಾಗಬೇಕು ಎಂದರು. ಸಾನಿಧ್ಯ ವಹಿಸಿದ್ದ ವಾಟಾಳು ಶ್ರೀ ಮಠದ ಶ್ರೀ ಸಿದ್ದಲಿಂಗಶಿವಾಚಾರ್ಯ ಸ್ವಾಮಿ ಮಾತನಾಡಿ, ಬಸವಣ್ಣನವರು ಕೇವಲ ಧಾರ್ಮಿಕ ನಾಯಕನಷ್ಟೇ ಅಲ್ಲ, ಸಮಾಜ ಸುಧಾರಣೆಯ ಮಹಾನ್ ಕ್ರಾಂತಿಕಾರರು. ಅವರ ಕಾಲದಲ್ಲಿ ಜಾತಿ-ಮತ ಭೇದಗಳು ಗಾಢವಾಗಿದ್ದಾಗ, ಅವರು ಸಮಾನತೆ, ಸ್ವಾಭಿಮಾನ ಮತ್ತು ಶ್ರಮದ ಮಹತ್ವವನ್ನು ಸಾರಿದರು ಎಂದು ತಿಳಿಸಿದರು. ಅಧ್ಯಕ್ಷತೆ ವಹಿಸಿದ್ದ ಶರಣ ಸಾಹಿತ್ಯ ಪರಿಷತ್ತಿನಜಿಲ್ಲಾಧ್ಯಕ್ಷ ಸಿದ್ದಪ್ಪ ಮಾತನಾಡಿದರು. ಮಾಡ್ರಹಳ್ಳಿ ಪಟ್ಟದ ಮಠದ ಶಾಂತ ಮಲ್ಲಿಕಾರ್ಜುನ ಸ್ವಾಮಿ, ಹಲವಾರ ಮುಡುಕನ ಪುರ ಮಠದ ಷಡಕ್ಷರ ದೇಶೀಕೇಂದ್ರ ಸ್ವಾಮೀಜಿ, ಸರಗೂರು ಹೊಸ ಮಠಾಧ್ಯಕ್ಷ ಬಸವರಾಜೇಂದ್ರ ಸ್ವಾಮಿ, ಮಠದ ಗುರುಪಾದ ಶಿವಾಚಾರ್ಯ ಸ್ವಾಮಿ, ಸೇತುವೆ ಮಠದ ಸಹಜಾನಂದ ಸ್ವಾಮಿ, ಮುಡುಕುತೊರೆ ರೇಣುಕಾ ಶಿವಾಚಾರ್ಯ ಸ್ವಾಮಿ, ವಿದ್ಯೋದಯ ಶಿಕ್ಷಣ ಸಂಸ್ಥೆಯ ಪ್ರಧಾನ ಕಾರ್ಯದರ್ಶಿ ಕೆ.ಪಿ. ಮಹದೇವಸ್ವಾಮಿ, ಕೃಷಿಕ ಸಮಾಜದ ಅಧ್ಯಕ್ಷ ಬಿ.ಎಂ.ಶಿವಮಲ್ಲಪ್ಪ, ಶಿವಕುಮಾರಸ್ವಾಮಿ ಸೇವಾ ಟ್ರಸ್ಟ್ ಅಧ್ಯಕ್ಷ ಬಜ್ಜಿ ನಿಂಗಪ್ಪ,ಕಾರ್ಯದರ್ಶಿ ಮಾಯಪ್ಪ, ಸಂಚಾಲಕ ಅದೃಷ್ಟ ಮಾದಪ್ಪ,ಬಸಪ್ಪ, ನಿರ್ದೇಶಕರಾದ ಪರಮೇಶ್ ಪಟೇಲ್,ಕಾರ್‌ಮಲ್ಲಪ್ಪ,ಆರ್.ಶಿವಕುಮಾರ್, ಕೆ. ಮಲ್ಲು, ಕೈಯ್ಯಂಬಳ್ಳಿ ಅಶೋಕ್,ಪಿಎಲ್ ಡಿ ಬ್ಯಾಂಕ್ ನಿರ್ದೇಶಕ ಮಹೇಶ್, ಬಿ. ವೀರಭದ್ರಪ್ಪ,ಎಸ್ ಎಂ ಆರ್‌ಪ್ರಕಾಶ್, ಕುಮಾರಸ್ವಾಮಿ, ರವಿ, ಜ್ಯೋತಿ, ಪರಮೇಶ್ ಪಟೇಲ್, ಅಕ್ಕಮಹಾದೇವಿ ಮಹಿಳಾ ಭಜನಾ ಸಂಘದ ಸದಸ್ಯರು ಇದ್ದರು.

ಅನ್ಯಾಯ ತಡೆಗಟ್ಟಿ | ಮಾಜಿ ಶಾಸಕ ಕೆ. ಮಹದೇವ್ ಆರೋಪ | ನೂತನ ಪದಾಧಿಕಾರಿಗಳ ಪದಗ್ರಹಣ


ಕಾಸು ಕೊಟ್ಟರೆ ಮಾತ್ರ ಸರ್ಕಾರಿ ಕಚೇರಿಯಲ್ಲಿ ಕೆಲಸ ಸಾಧ್ಯ

• **ಕನ್ನಡಪ್ರಭ ವಾರ್ತೆ** ಪಿರಿಯಾಪಟ್ಟಣ

ಸಾರ್ವಜನಿಕರು ಜೇಬಿನಲ್ಲಿ ಕಾಸು ತೆಗೆದುಕೊಂಡು ಹೋದರೆ ಮಾತ್ರ ಸರ್ಕಾರಿ ಕಚೇರಿಗಳಲ್ಲಿ ಕೆಲಸವಾಗುತ್ತದೆ ಇಲ್ಲದಿದ್ದರೆ ಇಲ್ಲ, ಇದು ಸಚಿವ ಕೆ. ವೆಂಕಟೇಶ್ ಆಡಳಿತದ ಭ್ರಷ್ಟಾಚಾರದ ಪರಮಾವಧಿ ಎಂದು ಮಾಜಿ ಶಾಸಕ ಕೆ. ಮಹದೇವ್ ಕಿಡಿಕಾರಿದರು.

ತಾಲೂಕಿನ ಮಂಜುನಾಥ ಸಮುದಾಯ ಭವನದಲ್ಲಿ ಆಯೋಜಿಸಿದ್ದ ನೂತನ ಪದಾಧಿಕಾರಿಗಳ ಆಯ್ಕೆ ಪದಗ್ರಹಣ ಕಾರ್ಯಕ್ರಮದಲ್ಲಿಭಾಗವಹಿಸಿಮಾತನಾಡಿದ ಅವರು, ತಾಲೂಕಿನ ರಾಗಿ ಖರೀದಿ ಕೇಂದ್ರದಲ್ಲಿ ಚೀಲವೊಂದಕ್ಕೆ ನಾಲ್ಕು ಕೆಜಿ ಕಳುಹಿಸಿದರೆ ಇದು ನಿಮ್ಮ ಕಣ್ಣಿಗೆ ಕಾಣುತ್ತಿಲ್ಲವೇ ಎಂದು ಪ್ರಶ್ನಿಸಿದರು.

ತಾಲೂಕಿನಲ್ಲಿ ತಾಲೂಕು ಕಚೇರಿಯಲ್ಲಿ ಹಣವಿಲ್ಲದೆ ಕೆಲಸವೆ ನಡೆಯುತ್ತಿಲ್ಲ, ನಮ್ಮ ಕೆಲಸಗಳನ್ನೆಲ್ಲ ವಜಾ ಮಾಡುತ್ತಿದ್ದೀರಿ, ನಿಮ್ಮ ಅವಧಿಯಲ್ಲಿಭ್ರಷ್ಟಾಚಾರತಂಡವಾಡುತ್ತಿದ್ದು, ಕಣ್ಣಿಗೆ ಏನಾದರೂ ಬಿದ್ದಿದ್ದರೆ ತೆಗೆಸಿಕೊಳ್ಳಿ ಕಿವಿಗೆ ಕೇಳದಿದ್ದರೆ ಕೇಳುವಂತೆ ಮಾಡಿಸಿಕೊಳ್ಳಿ



ಕೇಳುತ್ತದೆಕೇವಲಮುಂದಿನಚುನಾವಣೆಯಲ್ಲಿ ಜೆಡಿಎಸ್ ಕಾರ್ಯಕರ್ತರ ಶ್ರಮದಿಂದ ಪಕ್ಷವು ಪಿರಿಯಾಪಟ್ಟಣದಲ್ಲಿ ಶಾಸಕರನ್ನು ಕಾಣಬಹುದಾಗಿದೆ, ಇದಕ್ಕೆಲ್ಲ ನೀವು ಟೊಂಕಕಟ್ಟಿ ದುಡಿಯಬೇಕಾಗಿದೆ ಎಂದರು.

ಕಾರ್ಯಕರ್ತರ ಮುಂದೆ ಯಾರು ದೊಡ್ಡವರಲ್ಲ ಕಾರ್ಯಕರ್ತರಿದ್ದಾರೆ, ನಾವು ಕಾರ್ಯಕರ್ತರಿಗೆ ಪಕ್ಷದ ಏಳಿಗೆ ಅಸಾಧ್ಯ, ರಾಜ್ಯದಲ್ಲಿ ಲಕ್ಷಾಂತರ ಮಂದಿ ಕಾರ್ಯಕರ್ತರು ಮುಂಬರುವ ಚುನಾವಣೆಯಲ್ಲಿ ಜೆಡಿಎಸ್ ಗೆಲ್ಲಿಸಿ ಕುಮಾರಸ್ವಾಮಿ ಅವರನ್ನು ಮುಖ್ಯಮಂತ್ರಿ ಆಗಿ ನೋಡಲು ಕಾತುರದಿಂದ ಕಾಯುತ್ತಿದ್ದಾರೆ, ಅಂತಯೇ ಪಿರಿಯಾಪಟ್ಟಣದಲ್ಲಿಯೂ ಕೂಡ ಜೆಡಿಎಸ್ 2026ರ ಚುನಾವಣೆಯಲ್ಲಿ ಜಯಭೇರಿ ಬಾರಿಸಿ ಎರಡನೇ ಬಾರಿ ಶಾಸಕರಾಗಿ ಆಯ್ಕೆ ಮಾಡಲು ಸಮವಹಿಸಬೇಕಾಗಿದೆ ಎಂದರು.

ತಾಲೂಕು ಜೆಡಿಎಸ್ ಪದಾಧಿಕಾರಿಗಳ ವಿವರ : ಅಣ್ಣೆಶೆಟ್ಟಿ- ಅಧ್ಯಕ್ಷ, ಎಚ್.ಡಿ. ರಾಜೇಂದ್ರ- ಕೋರ್‌ಕಮಿಟಿ ಅಧ್ಯಕ್ಷ, ಸುನಿತಾ ಮಂಜುನಾಥ್- ಮಹಿಳಾ ಘಟಕದ ಅಧ್ಯಕ್ಷೆ, ಆಶಾ- ಕಾರ್ಯಾಧ್ಯಕ್ಷೆ, ಪ. ಪಂಗಡ ಘಟಕದ ತಾಲೂಕ ಕಾರ್ಯಾಧ್ಯಕ್ಷ- ತಿಮ್ಮನಾಯ್ಕ. ಯುವ ಘಟಕ ಸಂಘಟನಾ ಕಾರ್ಯದರ್ಶಿ- ಪ್ರಸನ್ನ, ಕಾರ್ಯದರ್ಶಿಯಾಗಿ ಪರಶಿವಮೂರ್ತಿ. ಹಿಂದುಳಿದ ವರ್ಗದ ಘಟಕದ ಕಾರ್ಯಾಧ್ಯಕ್ಷರಾಗಿ- ನಾಗೇಂದ್ರ ದೊರೆಕೆರೆ, ಯುವ ಜನತಾ ದಳದ ಪ್ರಧಾನ ಕಾರ್ಯದರ್ಶಿ -ಸುನಿಲ್ ಗೋವಿಂದೇಗೌಡ, ಯುವ ಘಟಕದ ಪ್ರಧಾನ ಕಾರ್ಯದರ್ಶಿ- ರಾಜು, ಕಾರ್ಯ ಕಾರಿಮಂಡಳಿ ಕಾರ್ಯದರ್ಶಿ - ಕುರ್ಮಾ. ತಾಲೂಕು ಘಟಕದ ಸಂಘಟನಾ ಕಾರ್ಯದರ್ಶಿ ಪ್ರೇಮ್ ಕು ಮಾರ್, ಸಂಘಟನಾ ಕಾರ್ಯದರ್ಶಿ- ಮುತ್ತುರಾಜ್, ಪಿ.ಸಿ. ಕೃಷ್ಣ. ಜಯಣ್ಣ, ಶಿಸ್ತು, ಸಮಿತಿ ಅಧ್ಯಕ್ಷ ಹಾಗೂ ಕಾನೂನು ಸಮಿತಿ ಅಧ್ಯಕ್ಷ- ನಾಗರಾಜು. ಕಾರ್ಯಕಾರಿ ಸಮಿತಿ ಅಧ್ಯಕ್ಷ- ರವಿ ಐಕಾನ್. ಕೋರ್‌ಕಮಿಟಿ ಪ್ರಧಾನ ಕಾರ್ಯದರ್ಶಿ- ಮಹದೇವ್, ಸ್ವಾಮಿ, ಬಸವರಾಜ ಅರಸ್, ಜೆಡಿಎಸ್ ತಾಲೂಕು ಘಟಕದ ಕಾರ್ಯಾಧ್ಯಕ್ಷ- ರೇಣುಕಾಸ್ವಾಮಿ, ತಾಲೂಕು ಕಾರ್ಯಕಾರಿ ಮಂಡಳಿ ಪ್ರಧಾನ ಕಾರ್ಯದರ್ಶಿ- ದಿನೇಶ, ಕೋರ್‌ಕಮಿಟಿ ಕಾರ್ಯದರ್ಶಿ - ಯತಿರಾಜೇಗೌಡ, ಮಂಜುನಾಥ್ ಸಿಂಗ್, ಜೆಡಿಎಸ್ ತಾಲೂಕು ಘಟಕ ಅಧ್ಯಕ್ಷ ಅಣ್ಣಯ್ಯಶೆಟ್ಟಿ, ಪುರಸಭಾ ಸದಸ್ಯ ಪಿ.ಸಿ. ಕೃಷ್ಣ, ಇಲಿಯಾಸ್, ಮಾಜಿ ಮೈಬುಲ್ ಜಿಲ್ಲಾ ಸದಸ್ಯ ಎಚ್.ಡಿ. ರಾಜೇಂದ್ರ, ಗ್ರಾಪಂ ಮಾಜಿ ಅಧ್ಯಕ್ಷ ರೇಣುಕಾಸ್ವಾಮಿ, ಎಸ್.ಜೆ. ನಾಗರಾಜ್, ಯಾಮಿನಿ ಜಯಣ್ಣ, ದೊರೆಕೆರೆ ನಾಗೇಂದ್ರ, ದಿನೇಶ್, ಜವರಪ್ಪ ಸುನಿತಾ.

ಸುದ್ದಿ ಸಿಂಚನ

ಉಚಿತ ಕೀಲು, ಮೂಳೆ ತಪಾಸಣಾ ಶಿಬಿರ

ಮೈಸೂರು: ರಾಮಕೃಷ್ಣನಗರದಲ್ಲಿರುವ ಸುಯೋಗ್ ಆಸ್ಪತ್ರೆಯಿಂದ ಮೇ 5 ರಿಂದ 9ರವರೆಗೆ ಬೆಳಗ್ಗೆ 10 ರಿಂದ ಸಂಜೆ 6ರವರೆಗೆ ಉಚಿತ ಕೀಲು, ಮೂಳೆ ತಪಾಸಣಾ ಶಿಬಿರವನ್ನು ಏರ್ಪಡಿಸಿದೆ. ಕೀಲು ಮತ್ತು ಮೂಳೆಶಾಸ್ತ್ರ ತಜ್ಞರಾದ ಡಾ.ಸಿ.ಆರ್. ಮೋಹನ್ ಕುಮಾರ್ ನೇತೃತ್ವದಲ್ಲಿ ಈ ಶಿಬಿರ ನಡೆಯಲಿದೆ. ಮಾಹಿತಿಗಾಗಿ ಮೊ. 9986399862 ಸಂಪರ್ಕಿಸಬಹುದು.

ಟೂಲ್ ರೂಂ ಮೆಷಿನಿಷ್ ಕೋರ್ಸಿಗೆ ಅರ್ಜಿ ಆಹ್ವಾನ

ಮೈಸೂರು: ಸರ್ಕಾರಿ ಉಪಕರಣಾಗಾರ ಮತ್ತು ತರಬೇತಿ ಕೇಂದ್ರದ ವತಿಯಿಂದ ಮೈಸೂರು ಕೇಂದ್ರದಲ್ಲಿ ಎಸ್ಸೆಸ್ಸೆಲ್ಸಿ ಉತ್ತೀರ್ಣ, ಅನುತ್ತೀರ್ಣರಾಗಿರುವ ವಿದ್ಯಾರ್ಥಿಗಳಿಗೆ ತಾಂತ್ರಿಕ ಕೌಶಲ್ಯ ನೀಡಿ ಉತ್ತಮ ಉದ್ಯೋಗಾವಕಾಶ ಕಲ್ಪಿಸುವ ಉದ್ದೇಶದಿಂದ ಬೆಳಗೊಳ ಕೈಗಾರಿಕಾ ಪ್ರದೇಶದಲ್ಲಿರುವ ತರಬೇತಿ ಕೇಂದ್ರವು 2025-26ನೇ ಸಾಲಿನ ಒಂದು ವರ್ಷದ ಟೂಲ್ ರೂಂ ಮೆಷಿನಿಸ್ಟ್ ಕೋರ್ಸ್‌ಗೆ ಅರ್ಜಿ ಆಹ್ವಾನಿಸಿದೆ. ಈ ಕೋರ್ಸಿನಲ್ಲಿ ಕನ್ವೆಷನಲ್ ಹಾಗೂ ಅಡ್ವಾನ್ಸ್ ಸಿ.ಎನ್.ಸಿ ಮಿಷಿನಿಂಗ್ ಒಳಗೊಂಡತೆ ಟರ್ನಿಂಗ್, ಮಿಲ್ಲಿಂಗ್, ಗ್ರೈಂಡಿಂಗ್ ವಿಭಾಗದಲ್ಲಿ ಪರಿಣೀತರಿಂದ ಥಿಯರಿ ಹಾಗೂ ಪ್ರಾಕ್ಟಿಕಲ್ ತರಬೇತಿ ನೀಡಲಾಗುವುದು ಮತ್ತು ಆರ್ಥಿಕವಾಗಿ ಹಿಂದುಳಿದ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ಅಭ್ಯರ್ಥಿಗಳಿಗೆ ಎಐಟಿಟಿ (ಎಸ್‌ಸಿಪಿ/ಟಿಎಸ್‌ಪಿ) ಯೋಜನೆ ಅಡಿಯಲ್ಲಿ ಉಚಿತವಾಗಿ ತರಬೇತಿಯನ್ನು ನೀಡಲಾಗುವುದು. ಮೇ 15 ಅರ್ಜಿ ಸಲ್ಲಿಸಲು ಕೊನೆಯ ದಿನ. ಹೆಚ್ಚಿನ ಮಾಹಿತಿಗಾಗಿ 93-94 ಬೆಳಗೊಳ ಕೈಗಾರಿಕ ಪ್ರದೇಶ ಕೆ.ಆರ್.ಎಸ್ ರಸ್ತೆ, ಮೈಸೂರು ಇಲ್ಲಿನ ಮೊ. 9945442654, 9019232390, ದೂ. 2582097 ನ್ನು ಸಂಪರ್ಕಿಸಬಹುದು ಎಂದು ಸಿಓಇ ಮುಖ್ಯಸ್ಥ ಶ್ರೀನಿವಾಸ್ ಎಸ್. ಭಟ್ ತಿಳಿಸಿದ್ದಾರೆ.

ಬಂಗಾಳದಲ್ಲಿ ಕತ್ತಲು ಹೋಗಿ ಕಮಲ ಅರಳಿದೆ

ಮೈಸೂರು ವಿಭಾಗದ ಸಹ ಪ್ರಭಾರಿ ಡಾ.ಈ.ಸಿ. ನಿಂಗರಾಜ್ ಗೌಡ | ಕೋಟ್ಯಂತರ ಬಿಜೆಪಿ ಕಾರ್ಯಕರ್ತರ ಕನಸು ನನಸಾಗಿದೆ

• **ಕನ್ನಡಪ್ರಭ ವಾರ್ತೆ** ಮೈಸೂರು



ಈ ಬಾರಿ ಬಿಜೆಪಿಯ ಅಭೂತಪೂರ್ವ ಚುನಾವಣೆಯ ಫಲಿತಾಂಶದಿಂದಾಗಿ ಪಶ್ಚಿಮ ಬಂಗಾಳದಲ್ಲಿ ಕತ್ತಲು ಹೋಗಿ ಕಮಲ ಅರಳಿದೆ, ಈ ಮೂಲಕ ಕೋಟ್ಯಂತರ ಬಿಜೆಪಿ ಕಾರ್ಯಕರ್ತರ ಕನಸು ನನಸಾಗಿದೆ ಎಂದು ಮೈಸೂರು ವಿಭಾಗದ ಸಹ ಪ್ರಭಾರಿ ಡಾ.ಈ.ಸಿ. ನಿಂಗರಾಜ್ ಗೌಡ ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ.

ಇದಕ್ಕಾಗಿ ಪ್ರಧಾನಮಂತ್ರಿ ನರೇಂದ್ರ ಮೋದಿ, ಗೃಹ ಸಚಿವ ಅಮೀತ್ ಶಹಾ, ಬಿಜೆಪಿಯ ರಾಷ್ಟ್ರೀಯ ಅಧ್ಯಕ್ಷ ನಿತೀನ್ ನಭೀನ್, ರಾಷ್ಟ್ರೀಯ ಸಂಘಟನಾ ಕಾರ್ಯದರ್ಶಿ ಬಿ.ಎಲ್. ಸಂತೋಷ್, ಯೋಗಿ ಆದಿತ್ಯ ನಾಥ್, ಸೇರಿದಂತೆ ಪಕ್ಷದ ಎಲ್ಲಾ ಮುಖಂಡರಿಗೆ ಅಭಿನಂದನೆ ಸಲ್ಲಿಸಿದ್ದಾರೆ.

ಕಳೆದ 50 ವರ್ಷಗಳಿಂದಲೂ ಪಶ್ಚಿಮಬಂಗಳದಲ್ಲಿ ಆಗಿನ ಕಮ್ಯೂನಿಷ್ಠರಿಂದ, ಕಳೆದ 15 ವರ್ಷಗಳಿಂದ ಟಿ.ಎಂ.ಸಿ ಕಾರ್ಯಕರ್ತರಿಂದ ಬಿಜೆಪಿ ಮತ್ತು ಸಂಘ ಪರಿವಾರದ ಸಾವಿರಾರು ಕಾರ್ಯಕರ್ತರ ಭರ್ಭರ ಹತ್ಯೆಗಳು ನಿರಂತರವಾಗಿ ನಡೆಯುತ್ತಲೇ ಇದ್ದವು.. ಈ ಅಭೂತಪೂರ್ವ ಚುನಾವಣೆಯ ಜಯದಿಂದಾಗಿ ಅವರೇಲ್ಲರ ಆತ್ಮಕ್ಕೆ ಶಾಂತಿ ಸಿಕ್ಕೀದಂತೆ ಆಗಿದೆ.

ಈ ಚುನಾವಣೆಯ ಜಯದಿಂದಾಗಿ ಪಶ್ಚಿಮಬಂಗಾಳದ ಸಮಗ್ರ ಅಭಿವೃದ್ಧಿ, ಗಡಿ ರಕ್ಷಣೆಯ ಮೂಲಕ ದೇಶದ ಸುರಕ್ಷತೆ, ಮಹಿಳೆಯರ ರಕ್ಷಣೆ, ಯುವಕರಿಗೆ ಉದ್ಯೋಗ, ಪ್ರವಾಸೋಧ್ಯಮ, ಕೈಗಾರಿಕಾ ಅಭಿವೃದ್ಧಿಯೂ ನಿಶ್ಚಿತವಾಗಿ ಆಗಲಿದೆಎಂದುಅವರುಅಚಲವಿಶ್ವಾಸವ್ಯಕ್ತಪಡಿಸಿದ್ದಾರೆ. ಪಶ್ಚಿಮಬಂಗಾಳ, ಅಸ್ಸಾಂ, ಪುದುಚೇರಿಯ ಅಧ್ಭುತ ಗೆಲವೂ ಹಾಗೂ ತಮಿಳು ನಾಡು, ಕೇರಳದಲ್ಲಿ ಬಿಜೆಪಿಗೆ ಮತನೀಡಿದಎಲ್ಲಾಮತದಾರರಿಗೂ,ಕಾರ್ಯಕರ್ತರಿಗೂ ಅವರು ಕೃತಜ್ಞತೆ ಸಲ್ಲಿಸಿದ್ದಾರೆ.

ಜಯಭೇರಿಯಿಂದ ಮೋದಿಯವರ ಅಲೆ ಇರುವುದು ಸ್ಪಷ್ಟ

ಚಾಮುಂಡೇಶ್ವರಿ ಕ್ಷೇತ್ರದ ಬಿಜೆಪಿ ಮುಖಂಡ ದಾರಿಪುರ ಡಿ. ಚಂದ್ರಶೇಖರ್ ಅಭಿಮತ

• **ಕನ್ನಡಪ್ರಭ ವಾರ್ತೆ** ಮೈಸೂರು



2026 ಫಲಿತಾಂಶಗಳಲ್ಲಿ ಪಶ್ಚಿಮ ಬಂಗಾಳದಲ್ಲಿ ಐತಿಹಾಸಿಕ ರಾಜಕೀಯ ಬದಲಾವಣೆ ಕಂಡು ಬಂದಿದ್ದು, ಭಾರತೀಯ ಜನತಾ ಪಾರ್ಟಿ ಭರ್ಜರಿ ಬಹುಮತದೊಂದಿಗೆ ಗೆದ್ದು ಮೋದಿ ಅಲೆಯ ಸ್ಪಷ್ಟ ಪ್ರತಿಬಿಂಬ ವಾಗಿದೆ ಎಂದು ಚಾಮುಂಡೇಶ್ವರಿ ಕ್ಷೇತ್ರದ ಬಿಜೆಪಿ ಮುಖಂಡ ದಾರಿಪುರ ಡಿ. ಚಂದ್ರಶೇಖರ್ ಹೇಳಿದ್ದಾರೆ.

ಹೊಸ ಆಡಳಿತಕ್ಕೆ ದಾರಿ ಮಾಡಿಕೊಟ್ಟಿದ್ದು, ತೃಣಮೂಲ ಕಾಂಗ್ರೆಸ್ ಗಂಭೀರ ಹಿನ್ನಡೆ ಅನುಭವಿಸಿದೆ. ನರೇಂದ್ರ ಮೋದಿ ಅವರ ಅಭಿವೃದ್ಧಿ ದೃಷ್ಟಿ ಮತ್ತು ಬಲಿಷ್ಠ ನಾಯಕತ್ವದ ಮೇಲೆ ಮತದಾರರು ವಿಶ್ವಾಸ ವ್ಯಕ್ತಪಡಿಸಿದ್ದು, ಮಮತಾ ಬ್ಯಾನರ್ಜಿಯವರ ನೇತೃತ್ವದ ಆಡಳಿತಕ್ಕೆ ಜನರು ಬದಲಾವಣೆಯ ತೀರ್ಪು ನೀಡಿದ್ದಾರೆ ಎಂದು ಅವರು ತಿಳಿಸಿದ್ದಾರೆ.

ಬಂಗಾಳದ ಜನರ ತೀರ್ಪು ದೇಶದ ಭವಿಷ್ಯದ ರಾಜಕೀಯ ದಿಕ್ಕನ್ನು ತೋರಿಸಿದೆ, ಇದು ಅಭಿವೃದ್ಧಿ ಮತ್ತು ಉತ್ತಮ ಆಡಳಿತದ ಪರ ಜಯ ಎಂದು ಅವರು ಅಭಿಪ್ರಾಯಪಟ್ಟಿದ್ದಾರೆ.

ಒಟ್ಟಾರೆ, ಈ ಫಲಿತಾಂಶವು ಕೇವಲ ಸರ್ಕಾರ ಬದಲಾವಣೆ ಅಲ್ಲ, ದೇಶವ್ಯಾಪಿ ರಾಜಕೀಯ ಶಕ್ತಿಯ ಮರು ಸಂಯೋಜನೆಗೆ ನಾಂದಿ ಹಾಡಿದ ಐತಿಹಾಸಿಕ ಕ್ಷಣವಾಗಿದೆ ಎಂದು ಅವರು ಹೇಳಿದ್ದಾರೆ.

ಜೆಎಸ್‌ಎಸ್ ಆಸ್ಪತ್ರೆಯಲ್ಲಿ ರಾಷ್ಟ್ರ ಮಟ್ಟದ ತರಬೇತಿ

• **ಕನ್ನಡಪ್ರಭ ವಾರ್ತೆ** ಮೈಸೂರು



ಜೆಎಸ್‌ಎಸ್ ಆಸ್ಪತ್ರೆಯ ಇಎನ್ ಟಿ ಮತ್ತು ಶಿರ ಹಾಗೂ ಕುತ್ತಿಗೆಯ ಶಸ್ತ್ರಚಿಕಿತ್ಸೆ ವಿಭಾಗದ ವತಿಯಿಂದ 7ನೇ ರಾಷ್ಟ್ರ ಮಟ್ಟದ ಟೆಂಪೊರಲ್ ಬೋನ್ ಡಿಸೆಕ್ಷನ್ ತರಬೇತಿ ಕಾರ್ಯಾಗಾರವನ್ನು ಇತ್ತೀಚೆಗೆ ಆಯೋಜಿಸಲಾಗಿತ್ತು.

ಈ ಕಾರ್ಯಾಗಾರ ಉದ್ಘಾಟಿಸಿದ ಜೆಎಸ್‌ಎಸ್ ಆಸ್ಪತ್ರೆಯ ನಿರ್ದೇಶಕ ಡಾ.ಸಿ.ಪಿ. ಮಧು ಮಾತನಾಡಿ, ಇಎನ್ ಟಿವಿಭಾಗದವತಿಯಿಂದನಡೆಯುತ್ತಿರುವ ಈ ಕಾರ್ಯಾಗಾರವು ಶಸ್ತ್ರಚಿಕಿತ್ಸಕರ ಕೌಶಲ್ಯಗಳನ್ನು ಅಭಿವೃದ್ಧಿಪಡಿಸುವ ಮತ್ತು ಸುಧಾರಿಸುವ ಕಾರ್ಯಕ್ರಮವಾಗಿದೆ ಎಂದರು. ಸಂಪನ್ಮೂಲ ವ್ಯಕ್ತಿಗಳಾಗಿ ಡಾ. ಸುನಿಲ್ ದತ್, ಡಾ. ಶ್ರೀನಿವಾಸ್ ಕಾಮತ್ ಮಾತನಾಡಿದರು. ಜೆಎಸ್‌ಎಸ್ ವೈದ್ಯಕೀಯ ಕಾಲೇಜಿನ ಪ್ರಾಂಶುಪಾಲ ಡಾ.ಡಿ. ನಾರಾಯಣಪ್ಪ, ಇಎನ್ ಟಿ ವಿಭಾಗದ ಮುಖ್ಯಸ್ಥ ಡಾ. ಪ್ರವೀಣ್ ಕುಮಾರ್, ಮೈಸೂರು ಇಎನ್ ಟಿ ಸಂಘದ ಅಧ್ಯಕ್ಷ ಡಾ.ಕೆ. ಸೋಮಸುಂದರ್, ಜೆಎಸ್‌ಎಸ್ ಆಸ್ಪತ್ರೆಯ ಹಿರಿಯ ವೈದ್ಯರಾದ ಡಾ. ಎಂ.ಬಿ. ಭಾರತಿ, ಇಎನ್ ಟಿ ವಿಭಾಗದ ಮುಖ್ಯಸ್ಥ ಡಾ.ಎಸ್. ಸಂದೀಪ್, ಡಾ.ಎ.ಆರ್. ಬಾಬು, ಡಾ.ಡಿ. ಸಂಧ್ಯಾ. ಡಾ. ಶಿಲ್ಪಾ, ಡಾ. ರಾಕೇಶ್, ಡಾ. ತನ್ಜಿಮುನಿಸಾ, ಡಾ. ಅಮೂಲ್ಯ, ಡಾ. ಅಮೃತಾ, ಡಾ. ಸ್ವಾತಿ, ಡಾ. ಪ್ರಹ್ಲಾದ್ ಮೊದಲಾದವರು ಇದ್ದರು.



ಅಭೂತ ಪೂರ್ವ ಜಯಭೇರಿ ಬಾರಿಸುವ ಮುಖಾಂತರ ಪಶ್ಚಿಮ ಬಂಗಾಳ, ಅಸ್ಸಾಂ, ಪುದುಚೇರಿಯಲ್ಲಿ ಭಾರತೀಯ ಜನತಾ ಪಾರ್ಟಿಯ ಗೆಲುವಿನ ಹಿನ್ನೆಲೆ ಮೈಸೂರಿನ ಚಾಮುಂಡಿಪುರಂನಲ್ಲಿ ನರೇಂದ್ರ ಮೋದಿ ಅಭಿಮಾನಿ ಬಳಗದವರು ಸಂಭ್ರಮಿಸಿದರು ಸುರೇಶ್, ಪಾಲಿಕೆ ಮಾಜಿ ಸದಸ್ಯ ಜಗದೀಶ್,ದೂರ ರಾಜಣ್ಣ, ಕೆ ಎಮ್ ನಿಶಾಂತ್, ಶ್ರೀಕಾಂತ ಕಶ್ಯಪ್, ಶಿವಲಿಂಗಸ್ವಾಮಿ, ಆನಂದ್, ರಾಮಚಂದ್ರ ರಾವ್, ಆದರ್ಶ್, ನಿವೃತ್ತ ಶಿಕ್ಷಕ ಮಹದೇವಸ್ವಾಮಿ, ಪುರುಷೋತ್ತಮ್, ಅಮಿತ್ ಇದ್ದರು.



ಚಾಮುಂಡೇಶ್ವರಿ ವಿಧಾನಸಭಾ ಕ್ಷೇತ್ರದ ವಾರ್ಡ್ ನಂ. 58ರ ರಾಮಕೃಷ್ಣನಗರ ಎಚ್. ಬ್ಲಾಕ್ ನಲ್ಲಿ ರೂ. 12 ಲಕ್ಷ ವೆಚ್ಚದಲ್ಲಿ ಶಾಸಕರ ಅನುದಾನದಲ್ಲಿ ನಿರ್ಮಾಣಗೊಂಡಿರುವ ಶುದ್ಧ ಕುಡಿಯುವ ನೀರಿನ ಘಟಕವನ್ನು ಶಾಸಕ ಜಿ.ಟಿ. ದೇವೇಗೌಡರು ಉದ್ಘಾಟಿಸಿದರು. ಸ್ಥಳೀಯ ನಿವಾಸಿಗಳು, ಮುಖಂಡರಾದ ಮಹೇಶ್, ದಿನೇಶ್ ಇದ್ದರು.

ಸಿಲಿಂಡರ್‌ದರ ಹೆಚ್ಚಳಕ್ಕೆ ಸಿಪಿಎಂ ಆಕ್ರೋಶ

ಮೈಸೂರು: ಕೇಂದ್ರ ಸರ್ಕಾರವು ವಾಣಿಜ್ಯ ಬಳಕೆಯ ಎಲ್ ಪಿಜಿ ಸಿಲಿಂಡರ್ ಗಳು ಮತ್ತು 5 ಕೆ.ಜಿ ಸಿಲಿಂಡರ್ ಗಳ ಬೆಲೆಯಲ್ಲಿ ತೀವ್ರ ಏರಿಕೆಯನ್ನು ಮಾಡಿರುವುದಕ್ಕೆ ಭಾರತ ಕಮ್ಯುನಿಸ್ಟ್ ಪಕ್ಷ (ಮಾರ್ಕ್ಸ್ ವಾದಿ) ಜಿಲ್ಲಾ ಸಮಿತಿ ಜಿಲ್ಲಾ ಕಾರ್ಯದರ್ಶಿ ಜಗದೀಶ್ ಸೂರ್ಯ ತೀವ್ರ ಆಕ್ರೋಶ ವ್ಯಕ್ತಪಡಿಸಿದ್ದಾರೆ. ವಾಣಿಜ್ಯ ಸಿಲಿಂಡರ್‌ದರಗಳಲ್ಲಿ ಸುಮಾರು ಒಂದು ಸಾವಿರ ರೂಪಾಯಿ ಗಳಷ್ಟು ತೀವ್ರ ಏರಿಕೆ ಮಾಡಿದ್ದರಿಂದ ಬೆರಳೆಣಿಕೆಯಷ್ಟು ನಾಮ್ಮಿಗಳ ಬೆಲೆಗಳು ತೀವ್ರವಾಗಿ ಏರುತ್ತವೆ. ವಾಣಿಜ್ಯ ಸಂಸ್ಥೆ ಗಳು ಹೊರೆಗಳನ್ನು ಗ್ರಾಹಕರ ಮೇಲೆ ದಾಟಿಸುತ್ತವೆ. ಇದು ಅವರ ಹೊರೆಗಳು ಮತ್ತು ಹಣ ದುಬ್ಬರವನ್ನು ಮತ್ತಷ್ಟು ಹೆಚ್ಚಿಸುತ್ತದೆ. ಅನೇಕ ಸಣ್ಣ ಸಂಸ್ಥೆಗಳು ಮುಚ್ಚುವಂತಾಗುತ್ತದೆ. ಇದು ಈಗಾಗಲೇ ನಡೆಯುತ್ತಿರುವ ಲೇ-ಆಫ್ ಗಳು ಮತ್ತು ಗಮನಾರ್ಹ ಉದ್ಯೋಗ ನಷ್ಟಗಳಿಗೆ ಕಾರಣವಾಗುತ್ತದೆ ಎಂದು ಆರೋಪಿಸಿದ್ದಾರೆ.



ಕಾವೇರಿ ಬಳಗ, ಹಿರಣ್ಮಯಿ ಪ್ರತಿಷ್ಠಾನ ವತಿಯಿಂದ ಮೈಸೂರಿನ ರಾಮಾನುಜ ರಸ್ತೆಯ ಶಿರಡಿ ಸಾಯಿಬಾಬಿ ಮಂದಿರದಲ್ಲಿ ಸೋಮವಾರ ಪ್ರತಿಭಾ ಪುರಸ್ಕಾರ ಏರ್ಪಡಿಸಲಾಗಿತ್ತು. ಎಸ್ಎಸ್ಎಲ್‌ಸಿ ಪರೀಕ್ಷೆಯ.ಲ್ಲಿ ಉನ್ನತ ಶ್ರೇಣಿಯಲ್ಲಿ ಪಾಸಾದ ಆಯ್ದ ಶಾಲೆಯ ವಿದ್ಯಾರ್ಥಿಗಳನ್ನು ಅಭಿನಂದಿಸಲಾಯಿತು. ಉಪಹಾರ ಗೋಪಾಲಸ್ವಾಮಿ, ನಿವೃತ್ತ ಡಯಟ್ ಪ್ರಾಂಶುಪಾಲ ಪುರುಷೋತ್ತಮ್, ಪತ್ರಕರ್ತ, ದೊಡ್ಡನಹುಂಡಿ ರಾಜಣ್ಣ, ಎ.ಸಂಗಪ್ಪ, ಕಾವೇರಿಯಮ್ಮ, ಮನೋಹರ್, ವಿ. ನಾರಾಯಣರಾವ್ ಮೊದಲಾದವರು ಭಾಗವಹಿಸಿದ್ದರು.

ಸುದ್ದಿ ಸಿಂಚನ

ಅರುಣ್‌ರಾವ್ ಲ್ಯಾಂಪ್ ಫೆಡರೇಷನ್ ಅಧ್ಯಕ್ಷರಾಗಿ ಕಾನೂನು ಬಾಹಿರ ಆಯ್ಕೆ: ಎ.ಜಿ. ಸ್ವಾಮಿ ಆರೋಪ

ಮೈಸೂರು: ಕೊಡಗು ಜಿಲ್ಲೆಯ ಕುಶಾಲನಗರ ತಾಲೂಕಿನ ಎಸ್.ಎನ್. ರಾಜರಾವ್ ಅವರ ಮಕ್ಕಳು ನಕಲಿ ಹಾಗೂ ಫೋರ್ಜರಿ ದಾಖಲೆಗಳ ಆಧಾರದ ಮೇಲೆ ಎಸ್‌ಟಿ ಪ್ರಮಾಣಪತ್ರ ಪಡೆದಿರುವುದು ತನಿಖೆ ವೇಳೆ ದೃಢಪಟ್ಟಿದೆ. ಜೊತೆಗೆ ಈ ಕುರಿತ ವಿಚಾರಣಾ ಪ್ರಕ್ರಿಯೆ ನ್ಯಾಯಾಲಯದಲ್ಲಿದೆ. ಹೀಗಿದ್ದರೂ ಸಹ ಈ ಕುಟುಂಬಕ್ಕೆ ಸೇರಿದವರಾದ ಎಸ್.ಆರ್. ಅರುಣ್‌ರಾವ್ ಕಾನೂನು ಬಾಹಿರವಾಗಿ ಲ್ಯಾಂಪ್ ಫೆಡರೇಷನ್‌ಗೆ ಇದೇ ಪ್ರಮಾಣಪತ್ರ ಸಲ್ಲಿಸಿ ಅಧ್ಯಕ್ಷರಾಗಿ ಆಯ್ಕೆಯಾಗಿದ್ದಾರೆಂದು ಅಖಿಲ ಭಾರತ ಆದಿವಾಸಿ ಹಿತರಕ್ಷಣಾ ಸಮಿತಿ ರಾಜ್ಯಾಧ್ಯಕ್ಷ ಎ.ಜಿ. ಸ್ವಾಮಿ ಆರೋಪಿಸಿದರು. ಕೊಡಗು ಜಿಲ್ಲಾಧಿಕಾರಿ ಸಹ ಇವರ ಫೋರ್ಜರಿ ಹಾಗೂ ನಕಲಿ ಆಗಿರುವ ಎಸ್‌ಟಿ ಪ್ರಮಾಣಪತ್ರ ರದ್ದು ಪಡಿಸುವಂತೆ ಆದೇಶಿಸಿದ್ದಾರೆ. ಆದರೆ ತಹಸೀಲ್ದಾರ್‌ಇದನ್ನು ಪಾಲಿಸಿಲ್ಲ. ಅರುಣ್ ರಾವ್ ಅವರು ಮರಾಠಿ ಸಮುದಾಯಕ್ಕೆ ಸೇರಿದ್ದರೂ ಸಹ ಎಸ್‌ಟಿಯ ಮರಾಠ್ ಎಂಬ ಜಾತಿಗೆ ಸೇರಿದವರಾ ಗಿದ್ದೇವೆಂದು ಹೇಳಿಕೊಂಡು ಜಾತಿ ಪ್ರಮಾಣಪತ್ರ ಪಡೆದಿದ್ದಾರೆ ಎಂದು ಸುದ್ದಿಗೋಷ್ಠಿಯಲ್ಲಿ ಅವರು ತಿಳಿಸಿದರು.ಈ ಕುರಿತ ವಿಚಾರಣೆ ನ್ಯಾಯಾಲಯದಲ್ಲಿ ನಡೆಯುತ್ತಿದೆ. ಆದರೂ ಸಹ ಇವರು ಲ್ಯಾಂಪ್ ಮಹಾ ಮಂಡಳದ ಅಧ್ಯಕ್ಷ ಸ್ಥಾನದ ಚುನಾವಣೆಯಲ್ಲಿ ಸ್ಪರ್ಧಿಸಿ ಆಯ್ಕೆಯಾಗಿದ್ದಾರೆ. ಹೀಗಾಗಿ ಈ ಆಯ್ಕೆ ಪ್ರಕ್ರಿಯೆ ರದ್ದುಗೊಳಿಸಬೇಕು. ನಕಲಿ ಜಾತಿ ಪ್ರಮಾಣ ಪತ್ರ ನೀಡಿದ ಅಧಿಕಾರಿಗಳ ವಿರುದ್ಧ ಶಿಸ್ತು ಕ್ರಮ ಜರುಗಿಸ ಬೇಕು. ಇಲ್ಲದಿದ್ದಲ್ಲಿ ರಾಜ್ಯಾದ್ಯಂತ ಎಸ್‌ಟಿ ಸಮುದಾ ಯದವರು ಪ್ರತಿಭಟಿಸಬೇಕಾಗುತ್ತದೆ ಎಂದು ಎಚ್ಚರಿಸಿ ದರು. ಪದಾಧಿಕಾರಿಗಳಾದ ರಾಜು, ಆರ್.ಕೆ. ಚಂದ್ರು ಇದ್ದರು.

ತಿಂಗಳ ಪರ್ಯಂತ ಉಚಿತ ನೇತ್ರತಪಾಸಣಾ ಶಿಬಿರಕ್ಕೆ ಎಎಸ್ ಜಿ ಕಣ್ಣಿನ ಆಸ್ಪತ್ರೆಯಿಂದ ಚಾಲನೆ

ಮೈಸೂರು: ನಗರದ ಸಿದ್ದಪ್ಪ ಚೌಕದ ಸಮೀಪದ ನಾರಾಯಣ ಶಾಸ್ತ್ರಿ ರಸ್ತೆಯಲ್ಲಿರುವ ಎಎಸ್ ಜಿ ಕಣ್ಣಿನ ಅಸ್ಪತ್ರೆ ವತಿಯಿಂದ ಸಾರ್ವಜನಿಕರಿಗಾಗಿ ತಿಂಗಳ ಪರ್ಯಂತ ಉಚಿತ ನೇತ್ರ ತಪಾಸಣಾ ಶಿಬಿರಕ್ಕೆ ಚಾಲನೆ ನೀಡಲಾಗಿದೆ. ಸೋಮವಾರದಿಂದ ಜೂನ್ 4 ರವರೆಗೆ ನಡೆಯಲಿರುವ ಈ ವಿಶೇಷ ಆರೋಗ್ಯ ಅಭಿಯಾನವು ಮೈಸೂರು ಹಾಗೂ ಸುತ್ತಮುತ್ತಲಿನ ಜನರಿಗೆ ಪ್ರಯೋಜನಕಾರಿಯಾಗಲಿದೆ. ಶಿಬಿರದ ಅಂಗವಾಗಿ ರೋಗಿಗಳಿಗೆ ನುರಿತ ತಜ್ಞರಿಂದ ಉಚಿತ ನೇತ್ರ ಸಮಾಲೋಚನೆ ಹಾಗೂ ಮೂಲಭೂತ ತಪಾಸಣೆ ನಡೆಸಲಾಗುತ್ತದೆ. ಕಣ್ಣಿನ ಸಮಸ್ಯೆಗಳನ್ನು ಆರಂಭಿಕ ಹಂತದಲ್ಲೇ ಪತ್ತೆ ಹಚ್ಚಿ ಸಮಯೋಚಿತ ಚಿಕಿತ್ಸೆ ನೀಡುವುದು ಈ ಅಭಿಯಾನದ ಮುಖ್ಯ ಉದ್ದೇಶವಾಗಿದೆ. ಜೊತೆಗೆ, ನಗದು ಪಾವತಿ ಮಾಡುವವರಿಗೆ ಆಪ್ಟಿಕಲ್ ಸೇವೆಗಳು, ರೋಗನಿರ್ಣಯ ಪರೀಕ್ಷೆಗಳು ಹಾಗೂ ಶಸ್ತ್ರಚಿಕಿತ್ಸೆಗಳ ಮೇಲೆ ವಿಶೇಷ ರಿಯಾಯಿತಿ ಸೌಲಭ್ಯ ಕಲ್ಪಿಸಲಾಗಿದೆ. 3600 ರೂ. ಮೌಲ್ಯದ ಲಸಿಕ್ ಉಚಿತ ಮೌಲ್ಯಮಾಪನವೂ ಪ್ರಮುಖ ಆಕರ್ಷಣೆಯಾಗಿದೆ ಎಂದು ಆಸ್ಪತ್ರೆಯ ವಿಟ್ರಿಯೋರೆಟಿನಾ ಶಸ್ತ್ರಚಿಕಿತ್ಸಕ ಹಾಗೂ ಯುವಿಯಾ ತಜ್ಞ ಡಾ.ಎಚ್.ಎಂ. ಮಹೇಶ್ ಕುಮಾರ್‌ತಿಳಿಸಿದ್ದಾರೆ. ಬೇಸಿಗೆಯಲ್ಲಿ ಕಣ್ಣಿನ ಸಮಸ್ಯೆಗಳು ಹೆಚ್ಚಾಗುವ ಸಾಧ್ಯತೆ ಇರುವುದರಿಂದ ಈ ಶಿಬಿರ ಅತ್ಯಂತ ಸಮಯೋಚಿತವಾಗಿದೆ. ಕಣ್ಣು ಒಣಗುವುದು, ಅಲರ್ಜಿಕ್ ಕಾಂಜಂಕ್ಟಿವಿಟಿಸ್, ಕಣ್ಣಿನ ಸೋಂಕುಗಳು ಮತ್ತು ಗುಳ್ಳೆಗಳು ಸಾಮಾನ್ಯವಾಗಿದ್ದು, ಮುನ್ನೆಚ್ಚರಿಕೆ ಅಗತ್ಯ. ಸಾರ್ವಜನಿಕರು ಸಾಕಷ್ಟು ನೀರು ಕುಡಿಯುವುದು, ಯುವಿ ರಕ್ಷಣಾತ್ಮಕ ಸನ್ ಗ್ಲಾಸ್ ಧರಿಸುವುದು, ಕಣ್ಣಿನ ಸ್ವಚ್ಛತೆ ಕಾಪಾಡುವುದು ಹಾಗೂ ಸ್ಕ್ರೀನ್ ಸಮಯವನ್ನು ಮಿತಿಗೊಳಿಸ ಬೇಕು. ಕಣ್ಣು ಕೆಂಪಾಗುವುದು ಅಥವಾ ದೃಷ್ಟಿಯಲ್ಲಿ ಬದಲಾವಣೆ ಕಂಡು ಬಂದರೆ ತಕ್ಷಣ ವೈದ್ಯರನ್ನು ಸಂಪರ್ಕಿಸಲು ಅವರು ಸಲಹೆ ನೀಡಿದ್ದಾರೆ. ನೋಂದ ಣಿಗಾಗಿ ಮೊ. 78498 32991 ಸಂಪರ್ಕಿಸಬಹುದು.

ಶ್ರೀ ರಾಮಕೃಷ್ಣ ಆಶ್ರಮದಲ್ಲಿ ಉಪನ್ಯಾಸ

ಮೈಸೂರು: ನಗರದ ಯಾದವಗಿರಿಯಲ್ಲಿರುವ ಶ್ರೀರಾಮಕೃಷ್ಣ ಆಶ್ರಮದಲ್ಲಿ ಮೇ 7, 9 ಮತ್ತು 10ರಂದು ಪ್ರತಿದಿನ ಸಂಜೆ 6 ರಿಂದ 6.50ರವರೆಗೆ ಸ್ವಾಮಿ ಶಾಂಭವಾನಂದಜೀ ಸ್ಮಾರಕ ಸಭಾಂಗಣದಲ್ಲಿ ಉಪನ್ಯಾಸ ನಡೆಯಲಿದೆ. ಮೇ 7ರಂದು ಶ್ರೀಮದ್ಭಗವದ್ಗೀತಾ ವಿಷಯ ಕುರಿತು ಸ್ವಾಮಿ ಜ್ಞಾನಯೋಗಾನಂದಜಿ, ಮೇ 9 ರಂದು ಲೀವಿಂಗ್‌ಅಟ್‌ದಿ ಸೋರ್ಸ್‌ಯೋಗ ಟೀ ಚಿಂಗ್ ಆಫ್ ವಿವೇಕಾನಂದ ವಿಷಯ ಕುರಿತು ಸ್ವಾಮಿ ಮಹಾಮೇಧಾನಂದಜಿ, 10 ರಂದು ಸಂತ ಶ್ರೇಷ್ಠರು ವಿಷಯ ಕುರಿತು ಸರ್ವದರ್ಶಾನಾನಂದಜಿ ಉಪನ್ಯಾಸ ನೀಡುವರು.

ಬಿಜೆಪಿ ಕಚೇರಿ ಎದುರು ಕಾರ್ಯಕರ್ತರ ಸಂಭ್ರಮ

ಮೂರು ರಾಜ್ಯಗಳಲ್ಲಿ ಗೆಲುವಿನ ಹಿನ್ನೆಲೆ ವಿಜಯೋತ್ಸವ | ಪ್ರಧಾನಿ ಮೋದಿ, ಗೃಹ ಸಚಿವ ಅಮಿತ್ ಶಾಗೆ ಅಭಿನಂದನೆ

• **ಕನ್ನಡಪ್ರಭ ವಾರ್ತೆ** ಮೈಸೂರು

ಪಶ್ಚಿಮ ಬಂಗಾಳ, ಅಸ್ಸಾಂ ಹಾಗೂ ಪುದುಚೇರಿ ರಾಜ್ಯಗಳ ವಿಧಾನಸಭಾ ಚುನಾವಣೆಯಲ್ಲಿ ಬಿಜೆಪಿ ಜಯಭೇರಿ ಬಾರಿಸಿರುವ ಹಿನ್ನೆಲೆಯಲ್ಲಿ ನಗರದ ಚಾಮರಾಜಪುರಂನಲ್ಲಿರುವ ಪಕ್ಷದ ಕಚೇರಿ ಎದುರು ಸೋಮವಾರ ವಿಜಯೋತ್ಸವ ಆಚರಿಸಲಾಯಿತು.

ಶಾಸಕ ಟಿ.ಎಸ್. ಶ್ರೀವತ್ಸ, ನಗರಾಧ್ಯಕ್ಷ ಎಲ್. ನಾಗೇಂದ್ರ, ಜಿಲ್ಲಾಧ್ಯಕ್ಷ ಕುಂಬ್ರಹಳ್ಳಿ ಸುಬ್ಬಣ್ಣ ಅವರ ನೇತೃತ್ವದಲ್ಲಿ ಮುಖಂಡರು, ಕಾರ್ಯಕರ್ತರು ವಿಜಯೋತ್ಸವ ಆಚರಿಸಿ, ಸಿಹಿ ಹಂಚಿ ಸಂಭ್ರಮಿಸಿದರು. ಪಶ್ಚಿಮ ಬಂಗಾಳದಲ್ಲಿ ಕಳೆದ ಹದಿನೈದು ವರ್ಷಗಳಿಂದ ಆಡಳಿತದಲ್ಲಿದ್ದ ಮಮತಾ ಬ್ಯಾನರ್ಜಿ ನೇತೃತ್ವದ ಟಿಎಂಸಿ ಧೂಳೀಪಟವಾಗಿ, ಇದೇ ಮೊದಲ ಬಾರಿ ಬಿಜೆಪಿ ಅಧಿಕಾರದ ಚುಕ್ಕಾಣಿ ಹಿಡಿದಿದೆ. ಅಸ್ಸಾಂನಲ್ಲಿ ಪಕ್ಷ ಮರಳಿ ಅಧಿಕಾರಕ್ಕೆ ಬಂದಿದೆ. ಪುದುಚೇರಿಯಲ್ಲಿ ಎನ್‌ಡಿಎ ಅಧಿಕಾರಕ್ಕೆ ಮರಳಿದೆ. ಇದಕ್ಕೆ ಪ್ರಧಾನಿ ನರೇಂದ್ರ ಮೋದಿ, ಕೇಂದ್ರ ಗೃಹ ಸಚಿವ ಅಮಿತ್ ಶಾ ಅವರ ನೇತೃತ್ವದ ಹೋರಾಟ ಕಾರಣ ಎಂದು ಮುಖಂಡರು ಶ್ಲಾಘಿಸಿದರು. ಅರಣ್ಯ ವಿಹಾರಧಾಮದ ಮಾಜಿ ಅಧ್ಯಕ್ಷ ಎಂ. ಅಪ್ಪಣ್ಣ, ಜಿಪಂ ಮಾಜಿ ಅಧ್ಯಕ್ಷ ಎಸ್. ಮಹದೇವಯ್ಯ. ಮಾಜಿ ಸದಸ್ಯ ಬಿ.ಎಸ್. ಸದಾನಂದ, ಮುಖಂಡ ರಾದ ಸಿ. ಅಶೋಕ, ಎಂ.ಎ. ಮೋಹನ ಸೇರಿದಂತೆ ಹಲವಾರು ಮುಖಂಡರು ಇದ್ದರು.



ವಿರೋಧಿಗಳಿಗೆ ತಕ್ಕ ಪಾಠ: ಸಂದೇಶ್ ಸ್ವಾಮಿ

• **ಕನ್ನಡಪ್ರಭ ವಾರ್ತೆ** ಮೈಸೂರು



ದೇಶದ ವಿವಿಧ ರಾಜ್ಯದಲ್ಲಿ ನಡೆದ ವಿಧಾನಸಭಾ ಚುನಾವಣೆಯಲ್ಲಿ ಬಿಜೆಪಿ ಜಯಭೇರಿ ಬಾರಿಸಿರುವುದು ವಿರೋಧಿಗಳಿಗೆ ಜನರು ಕಲಿಸಿರುವ ತಕ್ಕ ಪಾಠ ಎಂದು ಬಿಜೆಪಿ ಮುಖಂಡ ಹಾಗೂ ಮಾಜಿ ಮೇಯರ್ ಸಂದೇಶ್ ಸ್ವಾಮಿ ಪ್ರತಿಕ್ರಿಯೆ ನೀಡಿದ್ದಾರೆ.

ಪಶ್ಚಿಮ ಬಂಗಾಳದಲ್ಲಿ ಟಿಎಂಸಿ ನಾಯಕಿ ಮಮತಾ ಬ್ಯಾನರ್ಜಿ ಹದಿನೈದು ವರ್ಷಗಳಿಂದ ಮುಖ್ಯಮಂತ್ರಿಯಾಗಿ ಆಡಳಿತ ನಡೆಸಿದ್ದರೂ ಸಹ ಈ ಬಾರಿ ಟಿಎಂಸಿ ಬಿಜೆಪಿ ಎದುರು ದಯನೀಯವಾಗಿ ಸೋಲು ಕಂಡಿದೆ. ಈ ರಾಜ್ಯದಲ್ಲಿ ಕಾಂಗ್ರೆಸ್ ನೆಲಕಚ್ಚಿದೆ. ಅಸ್ಸಾಂ, ಪುದುಚೆರಿಯಲ್ಲೂ ಬಿಜೆಪಿ ಗೆಲುವು ಸಾಧಿಸಿರುವುದು ಕಾಂಗ್ರೆಸ್ ಮುಕ್ತ ಭಾರತ ನಿರ್ಮಾಣಕ್ಕೆ ಸಾಕ್ಷಿಯಾಗುತ್ತಿದೆ. ಕೇರಳದಲ್ಲಿ ಬಿಜೆಪಿ ಖಾತೆ ತೆರೆದಿರುವುದು ಆಶಾದಾಯಕ ಬೆಳವಣಿಗೆ ಎಂದಿದ್ದಾರೆ.

ಪಶ್ಚಿಮ ಬಂಗಾಳ ಹಾಗೂ ಅಸ್ಸಾಂ ರಾಜ್ಯಗಳಲ್ಲಿ ಅಲ್ಪಸಂಖ್ಯಾರು ಹೆಚ್ಚಿನ ಸಂಖ್ಯೆಯಲ್ಲಿದ್ದರು ಬಿಜೆಪಿ ಪ್ರಚಂಡ ಗೆಲವು ಸಾಧಿಸಿರುವುದು ಜಾತ್ಯತೀತ ಹಾಗೂ ಧರ್ಮಾತೀತವಾಗಿಅಖಂಡಭಾರತದಹಿಂದೂವಾದಕ್ಕೆ ದೊರೆತ ಮನ್ನಣೆ ಎಂದರೆ ತಪ್ಪಾಗಲಾರದು. ಇಂತಹ ಐತಿಹಾಸಿಕ ಗೆಲುವಿಗೆ ಕಾರಣವಾಗಿರುವ ಪ್ರಧಾನಮಂತ್ರಿ ನರೇಂದ್ರ ಮೋದಿ, ಗೃಹಮಂತ್ರಿ ಅಮಿತ್ ಶಾ ಹಾಗೂ ಬಿಜೆಪಿ ರಾಷ್ಟ್ರೀಯ ಅಧ್ಯಕ್ಷ ನಿತಿನ್ ನಬಿನ್ ಅವರಿಗೆ ಸಂದೇಶ್ ಸ್ವಾಮಿ ಅಭಿನಂದಿಸಿದ್ದಾರೆ.

2025ರ ದಸರೆಗೆ 42.95 ಕೋಟಿ ರು. ವೆಚ್ಚ : 7 ತಿಂಗಳ ನಂತರ ಲೆಕ್ಕ ಕೊಟ್ಟಿರುವ ಜಿಲ್ಲಾಡಳಿತ!

• **ಕನ್ನಡಪ್ರಭ ವಾರ್ತೆ** ಮೈಸೂರು

2025ನೇ ಸಾಲಿನ ಮೈಸೂರು ದಸರಾ ಮಹೋತ್ಸವಕ್ಕೆ 42.95 ಕೋಟಿ ರು. ವೆಚ್ಚವಾಗಿದೆ. ದಸರೆ ಮುಗಿದು ಏಳು ತಿಂಗಳ ನಂತರ ಜಿಲ್ಲಾಡಳಿತ ಲೆಕ್ಕ ನೀಡಿದೆ!.

ಒಟ್ಟು 45.03 ಕೋಟಿ ರು. ಅನುದಾನ ಬಿಡುಗಡೆಯಾಗಿದ್ದು, ಇದರಲ್ಲಿ 42.95 ಕೋಟಿ ರು. ವೆಚ್ಚವಾಗಿದೆ ಎಂದು ತಿಳಿಸಲಾಗಿದೆ.

- ಸರ್ಕಾರದಿಂದ ಬಿಡುಗಡೆಯಾದ ಅನುದಾನ– 30 ಕೋಟಿ, ಎಂಡಿಎದಿಂದ– 10 ಕೋಟಿ, ಪ್ರಾಯೋಜಕತ್ವದಿಂದ – 1.81 ಕೋಟಿ, ಟಿಕೆಟ್ ಮಾರಾಟದಿಂದ– 3.21 ಕೋಟಿ ರು. ಬಂದಿದೆ.
- ಉಪ ಸಮಿತಿ ವೆಚ್ಚಗಳು– ಕೋಟಿ ರು.ಗಳಲ್ಲಿ
- ಸ್ವಾಗತ ಆಮಂತ್ರಣ ಮತ್ತು ಸ್ಥಳಾವಕಾಶ– 5.57
- ಮೆರವಣಿಗೆ– 1.60
- ಪಂಜಿನ ಕವಾಯತು– 1.48
- ಸ್ತಬ್ಧಚಿತ್ರ–0.70
- ರೈತ/ಗ್ರಾಮೀಣ ದಸರಾ– 0.52
- ಸಾಂಸ್ಕೃತಿಕ ದಸರಾ– 2.08
- ಲಲಿತಕಲೆ– 0.22
- ಕವಿಗೋಷ್ಠಿ– 0.68
- ಯೋಗ ದಸರಾ– 0.23
- ಯುವದಸರಾ– 15.94
- ಯುವಸಂಭ್ರಮ– 2.52
- ಮಹಿಳಾ ಮಕ್ಕಳ ದಸರಾ– 0.40
- ಚಲನಚಿತ್ರ– 0.40
- ಕುಸ್ತಿ– 0.40
- ಅರಣ್ಯ ಇಲಾಖೆ–ಗಜಪಯಣ, ಅರಮನೆ ಆವರಣದಲ್ಲಿ ಆನೆಗಳ ನಿರ್ವಹಣಾ ವೆಚ್ಚ– 0.80
- ನಂಜನಗೂಡು ದೇವಸ್ಥಾನ ಆವರಣದಲ್ಲಿ ನಡೆಸಿದ ಕಾರ್ಯಕ್ರಮಗಳ ವೆಚ್ಚ– 0.60
- ರಂಗಾಯಣ– ನವರಾತ್ರಿ ರಂಗೋತ್ಸವ– 0.10
- ಸಿವಿಲ್ ಕಾಮಗಾರಿ– 5.73
- ಮಂಡ್ಯ ಜಿಲ್ಲಾಧಿಕಾರಿಗೆ– 2.00
- ಕರ್ನಾಟಕ ವಸ್ತು ಪ್ರದರ್ಶನ ಪ್ರಾಧಿಕಾರಕ್ಕೆ– 0.55
- ಐಟಿ ಮತ್ತು ಜಿಎಸ್‌ಟಿ– 0.37
- ಕನ್ನಡ ಪುಸ್ತಕ ಪ್ರಾಧಿಕಾರಕ್ಕೆ– 0. 2

ನ್ಯಾಯಕ್ಕಾಗಿ ಜಿಲ್ಲಾ ಪಿಡಿಒ ಸಂಘದಿಂದ ಜಿಪಂ ಸಿಇಒಗೆ ಮನವಿ

• **ಕನ್ನಡಪ್ರಭ ವಾರ್ತೆ** ಮೈಸೂರು



ಗದಗ ಜಿಲ್ಲೆಯ ರೋಣ ತಾಲೂಕಿನಲ್ಲಿ ನಡೆದ ಪಿಡಿಒ ಮುಕ್ತಂ ಹುಸೇನ್ ಕರಡಿಗುಡ್ಡ ಅವರ ಆತ್ಮಹತ್ಯೆಗೆ ನ್ಯಾಯ ಒದಗಿಸಬೇಕು ಎಂದು

ಕರ್ನಾಟಕ ರಾಜ್ಯ ಪಂಚಾಯತ್ ಅಭಿವೃದ್ಧಿ ಅಧಿಕಾರಿಗಳ ಕ್ಷೇಮಾಭಿವೃದ್ಧಿ ಸಂಘ ಜಿಲ್ಲಾ ಘಟಕ ಜಿಪಂ ಸಿಇಒ ಎಸ್. ಯುಕೇಶ್ ಕುಮಾರ್ ಅವರಿಗೆ ಮನವಿ ಸಲ್ಲಿಸಿದರು.

ಭವಿಷ್ಯದಲ್ಲಿ ಇಂತಹ ಅನಾಹುತಗಳು ಆಗದಂತೆ ನೋಡಿಕೊಳ್ಳಬೇಕು. ಉನ್ನತಮಟ್ಟದ ತನಿಖೆಯಾಗಬೇಕು. ಅವರ ಕುಟುಂಬಕ್ಕೆ ಸರ್ಕಾರದಿಂದ ಸಿಗಬೇಕಾದ ಎಲ್ಲಾ ಸೌಲಭ್ಯಗಳು ಸಿಗಬೇಕು ಎಂದು ಅವರು ಒತ್ತಾಯಿಸಿದರು.

ರಾಜ್ಯದ ಎಲ್ಲ ಗ್ರಾಮ ಪಂಚಾಯಿತಿಗಳಲ್ಲಿ ಪಿಡಿಒ.ಗಳಿಗೆ ಒತ್ತಡರಹಿತವಾಗಿ ಕೆಲಸ ಮಾಡುವ ವಾತಾವರಣ ಸೃಷ್ಟಿಸಬೇಕು. ಹಿರಿಯ ಅಧಿಕಾರಿಗಳು ಒತ್ತಡ ಹಾಕದೇ ಮಾರ್ಗದರ್ಶಕರಾಗಿ ಸಹಕರಿಸಬೇಕು. ಸಣ್ಣಪುಟ್ಟ ಆಡಳಿತಾತ್ಮಕಕಾರಣಗಳಿಗೆಪಿ.ಡಿ.ಓ. ಗಳನ್ನು ಅಮಾನತು ಮಾಡುವುದನ್ನು ನಿಲ್ಲಿಸಬೇಕು. ಕಾಲಮಿತಿಯೊಳಗೆ ತನಿಖೆ ಹಾಗೂ ಅಮಾನತು ತೆರವುಗೊಳಿಸಬೇಕು ಎಂದು ಮನವಿ ಮಾಡಿದರು.

ಮೀನಾಕ್ಷಿ ಸುಂದರಂ ಸಮಿತಿ ವರದಿಯನ್ನು ಜಾರಿಗೊಳಿಸಬೇಕು. ದಾಖಲೆರಹಿತ ವರದಿಗಳ ಆಧಾರದ ಮೇಲೆ ಬರುವ ದೂರುಗಳನ್ನು ತನಿಖೆ ಮಾಡುವುದನ್ನು ನಿಲ್ಲಿಸಬೇಕು.

ಈ ನಮ್ಮ ಬೇಡಿಕೆಗಳನ್ನು ಗಂಭೀರವಾಗಿ ಪರಿಗಣಿಸಿ ಪಿ.ಡಿ.ಓ.ಗಳ ಪರವಾದ ಸ್ಪಷ್ಟ ಆದೇಶಗಳನ್ನು ಹೊರಡಿಸುವ ಮೂಲಕ ಮತ್ತೊಬ್ಬ ಅಧಿಕಾರಿ ಆತ್ಮಹತ್ಯೆಯ ಹಾದಿ ಹಿಡಿಯದಂತೆ ತಡೆಯಬೇಕೆಂದು ಮನವಿ ಮಾಡಿದರು.

ಜಿಪಂ ಸಿಇಒ ಎಸ್. ಯುಕೇಶ್ ಕುಮಾರ್ ಮಾತನಾಡಿ, ಸರ್ಕಾರ ಯಾವಾಗಲೂ ನಿಮ್ಮ ಪರವಾಗಿ ಇರುತ್ತದೆ. ಸೂಕ್ಷ್ಮ ವಿಷಯಗಳಿಗೆ ಪಿಡಿಒಗಳು ಆತ್ಮಹತ್ಯೆಗೆ ಶರಣಾಗಬಾರದು. ಹಿರಿಯ ಅಧಿಕಾರಿಗಳು ನಿಮ್ಮ ಜೊತೆಗಿರುತ್ತೇವೆ. ನಿಮ್ಮ ಮನವಿಯನ್ನು ಸರ್ಕಾರಕ್ಕೆ ಸಲ್ಲಿಸಲಾಗುವುದು ಎಂದರು.

ಪಿಡಿಒ ಸಂಘದ ಜಿಲ್ಲಾ ಅಧ್ಯಕ್ಷ ಪ್ರಕಾಶ್, ಮಾಜಿ ಅಧ್ಯಕ್ಷ ರುಕ್ಮಾಂಗದ, ಪ್ರಧಾನ ಕಾರ್ಯದರ್ಶಿ ಬಸವರಾಜು, ರಾಜ್ಯ ಪರಿಷತ್ ಸದಸ್ಯ ಶಿವಣ್ಣ, ಮಹಾದೇವನಾಯ್ಕ, ಗಜೇಂದ್ರಕುಮಾರ್, ಸೌಮ್ಯ, ಮಹಮದ್ ಇಷಾಕ್, ಗಣೇಶ್ ಹಾಗೂ 50ಕ್ಕೂ ಹೆಚ್ಚು ಪಿಡಿಒಗಳು ಇದ್ದರು.

7 ರಂದು ಡಾ.ಎಲ್. ರೇವಣ್ಣಸಿದ್ದಯ್ಯಗೆ ಅಭಿನಂದನೆ

ದಾವಣಗೆರೆ ವಿಶ್ವವಿದ್ಯಾಲಯದಿಂದ ಗೌರವ ಡಾಕ್ಟರೇಟ್ ಪಡೆದ ಹಿನ್ನೆಲೆ ವಿವಿಧ ಸಂಘಗಳಿಂದ ಕಾರ್ಯಕ್ರಮ

• **ಕನ್ನಡಪ್ರಭ ವಾರ್ತೆ** ಮೈಸೂರು

ದಾವಣಗೆರೆವಿಶ್ವವಿದ್ಯಾಲಯದಿಂದಗೌರವಡಾಕ್ಟರೇಟ್ ಪಡೆದಿರುವ ಎಲ್. ರೇವಣಸಿದ್ದಯ್ಯ ಅವರನ್ನು ಜೆಎಸ್ಎಸ್ ಹಿರಿಯ ಪ್ರಸಾದ ನಿಲಯ ವಿದ್ಯಾರ್ಥಿಗಳ ಗೃಹ ನಿರ್ಮಾಣ ಸಹಕಾರ ಸಂಘ, ಜೆಎಸ್‌ಎಸ್ ಹಿರಿಯ ವಿದ್ಯಾರ್ಥಿಗಳ ಸಂಘ, ಮೈಸೂರು- ಚಾಮರಾಜನಗರ ಜಿಲ್ಲಾ ಗುಬ್ಬಿ ತೋಟದಪ್ಪನವರ ವಿದ್ಯಾರ್ಥಿನಿಲಯಗಳ ವತಿಯಿಂದ ಮೇ 7 ರ ಮಧ್ಯಾಹ್ನ 2ಕ್ಕೆ ವರುಣದ ಶಿವರಾತ್ರಿ ರಾಜೇಂದ್ರ ಅನುಭವ ಮಂಟದಲ್ಲಿ ಅಭಿನಂದಿಸಲಾಗುವುದು ಎಂದು ಸಹಕಾರ ಸಂಘದ ಅಧ್ಯಕ್ಷ ಎ.ಎಸ್. ಚನ್ನಬಸಪ್ಪ ತಿಳಿಸಿದರು.

ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ ಸಾನ್ನಿಧ್ಯ ವಹಿಸುವರು. ಎಚ್.ಎಸ್. ಚಂದ್ರಮೌಳಿ ಮಾತನಾಡುವರು ಎಂದು ಅವರು ಸೋಮವಾರ ಸುದ್ದಿಗೋಷ್ಠಿಯಲ್ಲಿ ಹೇಳಿದರು. ಹಿರಿಯ ಪತ್ರಕರ್ತ ಡಿ.ಪಿ. ಸತೀಶ್, ನಿವೃತ್ತ ಪೊಲೀಸ್ ಅಧಿಕಾರಿ ಜೆ.ಬಿ. ರಂಗಸ್ವಾಮಿ ಅತಿಥಿಗಳಾಗಿ ಭಾಗವಹಿಸುವರು ಎಂದರು. ಇನ್ನಿತರ ಪದಾಧಿಕಾರಿಗಳಾದ ಎ.ಎಸ್. ಗುರುಸ್ವಾಮಿ, ಸುಬ್ಬಪ್ಪ, ವಾಟಾಳ್ ಆನಂದ್, ಸಿ. ರಾಜಶೇಖರಮೂರ್ತಿ ಇದ್ದರು.



ಮೈಸೂರಿನಲ್ಲಿ ಸೋಮವಾರ ಎ.ಎಸ್. ಚನ್ನಬಸಪ್ಪ ಸುದ್ದಿಗೋಷ್ಠಿಯಲ್ಲಿ ಮಾತನಾಡಿದರು. ಪ್ರೊ. ಸುಬ್ಬಪ್ಪ, ಎ.ಎಸ್. ಗುರುಸ್ವಾಮಿ, ರಾಜಶೇಖರಮೂರ್ತಿ ವಾಟಾಳ್ ಆನಂದ್ ಇದ್ದರು.

ಕುವೆಂಪು ಮಂತ್ರಮಾಂಗಲ್ಯದಂತೆ ವಿವಾಹವಾದ ತನ್ಮಯ್- ಸಿಮ್ರಾನ



• **ಕನ್ನಡಪ್ರಭ ವಾರ್ತೆ** ಮೈಸೂರು

ಜಾತ್ಯತೀತ ಒಲವಿನ ವಿವಾಹ ವೇದಿಕೆ ಮಾನವ ಮಂಟಪದ ಆಶ್ರದಲ್ಲಿ ಆರ್. ತನ್ಮಯ್ ಹಾಗೂ ಎಚ್.ಆರ್. ಸಿಮ್ರಾನ ಕುವೆಂಪು ಮಂತ್ರ ಮಾಂಗಲ್ಯದ ವಿಧಾನದಂತೆ ಮದುವೆಯಾದರು.

ನಗರದ ನಿತ್ಯೋತ್ಸವ ಸಭಾಂಗಣದಲ್ಲಿ ಸೋಮವಾರ ಏರ್ಪಡಿಸಿದ್ದ ಮಂತ್ರ ಮಾಂಗಲ್ಯ ಸಮಾರಂಭದಲ್ಲಿ ಸಾಹಿತಿ ಪೂರ್ಣಚಂದ್ರ ತೇಜಸ್ವಿ ಅವರ ಪತ್ನಿ ರಾಜೇಶ್ವರಿ ಅವರ ಅಕ್ಕನ ಮಗನಾದ ಮೂಡಿಗೆರೆಯ ಕೃಷಿಕ ಹಾಗೂ ಪುಸ್ತಕ ಪ್ರಕಾಶನದಲ್ಲಿ ಒಬ್ಬರಾದ ಆರ್. ರಾಘವೇಂದ್ರ ಮತ್ತು ಎಂ.ಎನ್. ವಿನತ ಅವರ ಪುತ್ರ ತನ್ಮಯ್ ಹಾಗೂ ನಗರದ ಡಾ. ಶಶಿರೇಖಾ ಮಾಚಾನಿ ಮತ್ತು ಡಾ. ಎಚ್.ಟಿ.ರವೀಂದ್ರ ಅವರ ಪುತ್ರಿ ಸಿಮ್ರಾನ ಮದುವೆಯಾದರು. ಇವರಿಬ್ಬರೂ ಸಾಫ್ಟ್‌ವೇರ್ ಎಂಜಿನಿಯರ್ ಗಳಾಗಿದ್ದು, ಮಾನ ವ ಮಂಟಪದ ಕೆ. ಕಾಳಚನ್ನೇಗೌಡ ವಧು- ವರರಿಗೆ ವಿವಾಹದ ಪ್ರಮಾಣ ವಚನ ಬೋಧಿಸಿದರು. ಕುವೆಂಪು ಅವರ ವಿವಾಹ ಸಂಹಿತೆಯನ್ನು ಉಗ್ರನರಸಿಂಹೇಗೌಡ ಓದಿದರು. ಧನಂಜಯ ಎಲಿಯೂರು ಕಾರ್ಯಕ್ರಮ ನಿರ್ವಹಿಸಿದರು. ಕುವೆಂಪು ಅವರ ಅಳಿಯ ಡಾ. ಚಿದಾನಂದಗೌಡ, ಮಗಳು ತಾರಿಣಿ, ಪುಸ್ತಕ ಪ್ರಕಾಶನದ ನಿವೃತ್ತ ಪ್ರಾಧ್ಯಾಪಕ ಶ್ರೀರಾಮ್ ಹಾಗೂ ಲೇಖಕಿ ಪದ್ಮಾ ಶ್ರೀರಾಮ್, ಕವಯತ್ರಿ ಲತಾ ಮೈಸೂರು, ಉಪನ್ಯಾಸಕಿ ಸ್ನೇಹಾ ಓಂಕಾರ್ ಭಾಗವಹಿಸಿದ್ದರು.

'ಬಸವ ತತ್ವ ಎಲ್ಲರೂ ಪಾಲಿಸಿ'



• **ಕನ್ನಡಪ್ರಭ ವಾರ್ತೆ** ಮೈಸೂರು

ಬಸವಣ್ಣನವರ ತತ್ವಗಳನ್ನು ಪಾಲಿಸಬೇಕು. ಸಮಾಜದಲ್ಲಿ ಸಮಾನತೆ, ಸಹೋದರತ್ವ ಪಾಲಿಸಿದರೆ ಉತ್ತಮ ಎಂದು ಶಾಸಕ ಜಿ.ಟಿ. ದೇವೇಗೌಡ ಹೇಳಿದರು.

ತಾಲೂಕಿನ ಜಯಪುರ ಹೋಬಳಿಯ ಹಾರೋಹಳ್ಳಿ ಗ್ರಾಮದಲ್ಲಿ ನಡೆದ ಬಸವ ಜಯಂತಿ ಕಾರ್ಯಕ್ರಮ ಉದ್ಘಾಟಿಸಿ ಅವರು ಮಾತನಾಡಿ.

12ನೇ ಶತಮಾನದ ಮಹಾನ್ ಸಮಾಜ ಸುಧಾರಕ ಬಸವಣ್ಣ ಅವರ ತತ್ವಗಳು ಇಂದಿನ ಸಮಾಜಕ್ಕೂ ದಾರಿದೀಪವಾಗಿವೆ ಎಂದು ಅವರು ಹೇಳಿದರು. ಜಾತಿ, ಲಿಂಗ ಬೇಧವಿಲ್ಲದೆ ಎಲ್ಲರೂ ಸಮಾನರು ಎಂಬ ಸಂದೇಶವನ್ನು ಬಸವಣ್ಣನವರು ತಮ್ಮ ವಚನಗಳ ಮೂಲಕ ಸಾರಿದರು. ಕಾಯಕವೇ ಕೈಲಾಸ ಎಂಬ ಅವರ ಮಂತ್ರವು ದುಡಿಮೆ, ನಿಷ್ಠೆ ಮತ್ತು ಪ್ರಾಮಾಣಿಕ ಬದುಕಿನ ಮಹತ್ವವನ್ನು ಪ್ರತಿಪಾದಿಸುತ್ತದೆ ಎಂದು ತಿಳಿಸಿದರು.

ಅನುಭವ ಮಂಟಪವನ್ನು ಸ್ಥಾಪಿಸಿ ಸಮಾನತೆಯ ಚರ್ಚಾ ವೇದಿಕೆ ನಿರ್ಮಿಸಿದ ಬಸವಣ್ಣನವರು, ಸಮಾಜದಲ್ಲಿ ಸಮಗ್ರ ಬದಲಾವಣೆಗೆ ಕಾರಣರಾದರು. ಮಹಿಳೆಯರಿಗೂ ಸಮಾನ ಅವಕಾಶ ಕಲ್ಪಿಸಿ, ವಿಶೇಷವಾಗಿ ಅಕ್ಕ ಮಹಾದೇವಿ ಅವರಿಗೆ ಗೌರವಾನ್ವಿತ ಸ್ಥಾನ ನೀಡಿದುದು ಅವರ ಪ್ರಗತಿಪರ ಚಿಂತನೆಗೆ ಸಾಕ್ಷಿಯಾಗಿದೆ ಎಂದರು. ಯುವಕರು ಬಸವಣ್ಣನವರ ಆದರ್ಶಗಳನ್ನು ಅಳವಡಿಸಿಕೊಂಡು ಉತ್ತಮ ಸಮಾಜ ನಿರ್ಮಾಣದಲ್ಲಿ ತೊಡಗಿಸಿಕೊಳ್ಳಬೇಕು. ಅವರ ಕಾಯಕ, ನಿಷ್ಠೆ ಮತ್ತು ಸೇವಾಭಾವ ಇಂದಿನ ಪೀಳಿಗೆಗೆ ಮಾದರಿಯಾಗಿದೆ ಎಂದು ಹೇಳಿದರು. ಮುಂದಿನ ದಿನಗಳಲ್ಲಿ ಬಸವಣ್ಣನವರ ಪ್ರತಿಮೆನಿರ್ಮಿಸುವುದಾಗಿಘೋಷಿಸಿದರು. ಸಮಾಜ ಸೇವೆಯಲ್ಲಿ ತೊಡಗಿರುವವರಿಗೆ ಸದಾ ಒಳ್ಳೆಯ ಫಲ ದೊರೆಯುತ್ತದೆ ಎಂದು ಅವರು ಅಭಿಪ್ರಾಯಪಟ್ಟರು.

ಗಾಯಕ ಶಿವಾರ ಉಮೇಶ್, ಜಯಪುರ ಜವರನಾಯಕ, ದಾರಿಪುರ ಬಸವಣ್ಣ, ಗ್ರಾಮದ ಮಹದೇವಪ್ಪ, ಬಸವಣ್ಣ, ನಾಗಣ್ಣ, ಶಿವಲಿಂಗ, ಮಲ್ಲಿಕಾರ್ಜುನ ಇದ್ದರು.

ಮಾರ್ಗದರ್ಶನ | ಲೇಖಕ ಬಿ. ಸಿ. ದೊಡ್ಡೇಗೌಡ ಅಭಿಮತ

ಸಂತೃಪ್ತ ಜೀವನಕ್ಕೆ ಸರಳತೆಯೇ ಅಡಿಪಾಯ

• **ಕನ್ನಡಪ್ರಭ ವಾರ್ತೆ** ಮೈಸೂರು

ಸಂತೃಪ್ತ ಜೀವನಕ್ಕೆ ಸರಳತೆಯೇ ಅಡಿಪಾಯವಾಗಬೇಕು ಎಂದು ಲೇಖಕ ಬಿ. ಸಿ. ದೊಡ್ಡೇಗೌಡ ಅಭಿಪ್ರಾಯಪಟ್ಟರು.

ನಗರದ ಲಗೋರಿ ಅಂಗಳ ಮತ್ತು ಕ್ರಿಯಾ ಸಂಸ್ಥೆಗಳ ಸಹಯೋಗದಲ್ಲಿ ನಡೆದ ಮೇ ತಿಂಗಳ ಮಾತುಕತೆ ಕಾರ್ಯಕ್ರಮದಲ್ಲಿ 'ಇಕ್ಕಿಗಾಯ್ : ದೀರ್ಘಾಯಸ್ಸು ಮತ್ತು ಸಂತಸದಾಯಕ ಜೀವನ ಸೂತ್ರಗಳು' ವಿಷಯ ಕುರಿತು ಉಪನ್ಯಾಸ ಮತ್ತು ಸಂವಾದದಲ್ಲಿ ಅವರು ಮಾತನಾಡಿದರು.

ಹೇಗಾದರೂ ಮಾಡಿ ಅದ್ದೂರಿಯಾದ ಜೀವನ ನಡೆಸುವುದುಯಾವತ್ತೂನಮ್ಮಗುರಿಯಾಗಬಾರದು, ಬದಲಿಗೆ ಇರುವುದರಲ್ಲಿಯೇ ಸಂತೃಪ್ತವಾದ ಜೀವನ ನಡೆಸುವುದು ನಮ್ಮ ಬದುಕಿನ ಮಹತ್ವಾಕಾಂಕ್ಷೆಯಾಗಬೇಕು. ಇದು ನಮ್ಮ ದೈಹಿಕ ಆರೋಗ್ಯ ಮತ್ತು ಮಾನಸಿಕಆರೋಗ್ಯ ಕಾಪಾಡಿಕೊಳ್ಳುವಸುಲಭವಾದ ಮಾರ್ಗ ಎಂದರು. 'ಇಕ್ಕಿಗಾಯ್' ಎಂದರೆ ಜೀವನದ ಉದ್ದೇಶ ಎಂದು ಅರ್ಥ. ಇದು ಜಪಾನಿನ ಓಕಿನೊವಾ ದ್ವೀಪದ ಜನರು ದೀರ್ಘ ಮತ್ತು ಆರೋಗ್ಯಕರ ಜೀವನ ನಡೆಸಲು ಅನುಸರಿಸುತ್ತಿರುವ ಜೀವನ ಶೈಲಿಯಾಗಿದೆ. ಈ ಜೀವನ ವಿಧಾನದಲ್ಲಿ ನಾಲ್ಕು ಪ್ರಮುಖ ಅಂಶಗಳಿವೆ . ನಿಮಗೆ ಇಷ್ಟವಾದ ವಿಷಯ, ನೀವು ಪರಿಣತಿಯುಳ್ಳ ಕೆಲಸ, ನೀವು ಸಮಾಜಕ್ಕೆ ನೀವು ನೀಡಬಹುದಾದ ಕೊಡುಗೆ ಮತ್ತು ನಿಮ್ಮ ಜೀವನಕ್ಕೆ ಬೇಕಾದ ದುಡಿಮೆ ಇವುಗಳನ್ನು ಸಾಧ್ಯವಾದಷ್ಟು ಮೊದಲು ಕಂಡುಕೊಳ್ಳಬೇಕು, ಆದ್ದರಿಂದ ಮಾತ್ರ ನೆಮ್ಮದಿಯ ಬದುಕು ಸಾಧ್ಯ ಎಂದರು.

ಎರಡನೇ ಭಾಗದಲ್ಲಿ ರೈತರು ಮೋಸಕ್ಕೆ ಒಳಗಾಗುತ್ತಿರುವ ಬಗ್ಗೆ ಪ್ರಚಲಿತ ಘಟನೆಗಳ ಆಧಾರಿತವಾದ ಕಥೆಯನ್ನು ದಿನೇಶ್ ಅಘಲಯ ನಿರೂಪಿಸಿದರು. ಕಾರ್ಯಕ್ರಮದ ಮುನ್ನುಡಿಯನ್ನು ಕೆ. ಮಾಲತಿ ನಡೆಸಿಕೊಟ್ಟರು. ಸಂವಾದದಲ್ಲಿ ಪ್ರೊ. ನೀಲಗಿರಿ ತಳವಾರ್, ಪ್ರಸನ್ನ ಕುಮಾರ್ ಕೆರಗೋಡು,

ಕೃ.ಪಾ. ಗಣೇಶ್, ಹಾಲತಿ ಸೋಮಶೇಖರ್, ಆರ್. ಚಲಪತಿ, ನೀ.ಗೂ. ರಮೇಶ್, ಕನಕ ಮಾಲಿನಿ, ನಾಗೇಂದ್ರ. ಹೆಬ್ಬಾರ್, ಬೆಟ್ಟಸ್ವಾಮಿ, ಮಹದೇವ ಚಿಕ್ಕಮರಳಿ ಭಾಗವಹಿಸಿದ್ದರು.



ಶಿವಲಿಂಗಪ್ಪನವರ ಕೃತಿಗಳು ಹಿಂದಿ, ಮರಾಠಿಗೆ ಅನುವಾದ

ಮಹಾ ಮಾನವತಾವಾದಿ ಬಸವಣ್ಣ, ವೀರವೈರಾಗ್ಯನಿಧಿ ಅಲ್ಲಮಪ್ರಭು ಕೃತಿಗಳ ಹೆಗ್ಗಳಿಕೆ

• **ಕನ್ನಡಪ್ರಭ ವಾರ್ತೆ** ಮೈಸೂರು


ಹಿರಿಯ ಕಲಾವಿದ ಎಲ್. ಶಿವಲಿಂಗಪ್ಪ ಅವರ ಮಹಾ ಮಾನವತಾವಾದಿ ಬಸವಣ್ಣ' ಕೃತಿಯು ಹಿಂದಿಗೆ ಹಾಗೂ 'ವೀರವೈರಾಗ್ಯನಿಧಿ ಅಲ್ಲಮ ಪ್ರಭು' ಕೃತಿಯು ಮರಾಠಿಗೆ ಅನುವಾದವಾಗಿವೆ.


ಮಹಾ ಮಾನವತಾವಾದಿ ಬಸವಣ್ಣಕೃತಿಯನ್ನುಬಸವರಾಜ್ ಎಸ್. ಜಮದಾರ್‌ಹಾಗೂ ಕಮಲಾಕ್ಷಿ ಅಶೋಕ್ ಭಂಡ್ರಾಪುರ್‌ಹಿಂದಿಗೆ ಅನುವಾದಿಸಿ ದ್ದಾರೆ.ಭಾಲ್ಕಿಯ ಹಿರೇಮಠ ಸಂಸ್ಥಾನ ಟ್ರಸ್ಟ್, ಮಹಾರಾಷ್ಟ್ರ ಬಸವ ಪರಿಷತ್‌ಪ್ರಕಟಿಸಿದೆ. ಈಗಾಗಲೇ ಈ ಕೃತಿಯು ಇಂಗ್ಲಿಷ್, ತೆಲುಗು ಹಾಗೂ ಮರಾಠಿಯಲ್ಲೂ ಪ್ರಕಟವಾಗಿದೆ.


ವೀರವೈರಾಗ್ಯನಿಧಿ ಅಲ್ಲಮ ಪ್ರಭು ಕೃತಿ ಯನ್ನು ಪ್ರೊ.ಶಾಲಿನಿ ಶ್ರೀಶೈಲ್ ದೊಡಮನಿ ಅವರು ಮರಾಠಿಗೆ ಅನುವಾದಿಸಿದ್ದಾರೆ.

ಈ ಕೃತಿಯನ್ನು ಕೂಡ ಹಿರೇಮಠ್ ಸಂಸ್ಥಾನ ಟ್ರಸ್ಟ್ ಪ್ರಕಟಿಸಿದ್ದು, ಈಗಾಗಲೇ ಇಂಗ್ಲಿಷ್‌ಗೆ ಅನುವಾಗಿದೆ.

ಆಸಕ್ತರು ಈ ಕೃತಿಗಳ ಕನ್ನಡ ಲೇಖಕರಾದ ಎಲ್. ಶಿವಲಿಂಗಪ್ಪ, ಮೊ. 99868 81128 ಸಂಪರ್ಕಿಸಬಹುದು.







ಇಂದು ಬಿಡುಗಡೆ

ಬಸವ ಬಳಗಗಳ ಒಕ್ಕೂಟವು ಮೇ 5 ರಂದು ಸಂಜೆ 6ಕ್ಕೆ ನಜರಬಾದಿನ ಸರ್ಕಾರಿ ಅತಿಥಿಗೃಹದಲ್ಲಿ ಏರ್ಪಡಿಸಿರುವ ಕಾರ್ಯಕ್ರಮದಲ್ಲಿ ಎಲ್. ಶಿವಲಿಂಗಪ್ಪ ಅವರ ''''ಮಹಾ ಮಾನವತಾವಾದಿ ಬಸವಣ್ಣ''''- ಹಿಂದಿ ಹಾಗೂ ''''ವೀರವೈರಾಗ್ಯನಿಧಿ ಅಲ್ಲಮಪ್ರ ಭು''''- ಮರಾಠಿ ಕೃತಿಗಳನ್ನು ಕೇಂದ್ರ ರೈಲ್ವೆ ಖಾತೆ ರಾಜ್ಯ ಸಚಿವ ವಿ. ಸೋಮಣ್ಣ ಬಿಡುಗಡೆ ಮಾಡುವರು. ಕೃತಿಗಳನ್ನು ಕುರಿತು ಕುವೆಂಪು ಭಾಷಾ ಭಾರತಿ ಪ್ರಾಧಿಕಾರದ ಮಾಜಿ ಅಧ್ಯಕ್ಷ ಡಾ. ಪ್ರಧಾನ ಗುರುದತ್ತ ಮಾತನಾಡುವರು. ಒಕ್ಕೂಟದ ಅಧ್ಯಕ್ಷ ಎಂ. ಚಂದ್ರಶೇಖರ್, ಪ್ರಧಾನ ಕಾರ್ಯದರ್ಶಿ ಎ.ಪಿ. ವಿರೂಪಾಕ್ಷ, ಪ್ರಧಾನ ಸಂಚಾಲಕ ದೇವರಾಜ್ ಪಿ. ಚಿಕ್ಕಹಳ್ಳಿ, ಕಾರ್ಯಕ್ರಮ ಸಮಿತಿ ಅಧ್ಯಕ್ಷ ಎಸ್. ಪುಟ್ಟರಾಜಪ್ಪ ಉಪಸ್ಥಿತರಿರುವರು.

ನಿಗಮದ ಆದಾಯ ಹೆಚ್ಚಳಕ್ಕೆ ಹೆಚ್ಚಿನ ಆದ್ಯತೆ ಅಗತ್ಯ

ಇಂಧನ ಇಲಾಖೆಯ ಹೆಚ್ಚುವರಿ ಮುಖ್ಯ ಕಾರ್ಯದರ್ಶಿ ಗೌರವ್ ಗುಪ್ತ ಸೂಚನೆ | ಸೆಸ್ಕ್, ಕೆಪಿಟಿಸಿಎಲ್‌ನ ಪ್ರಗತಿ ಪರಿಶೀಲನಾ ಸಭೆ

• **ಕನ್ನಡಪ್ರಭ ವಾರ್ತೆ** ಮೈಸೂರು

ವಿದ್ಯುತ್ ವಿತರಣಾ ವ್ಯವಸ್ಥೆ ಬಲಪಡಿಸುವುದರ ಜತೆಗೆ ಆದಾಯ ಸಂಗ್ರಹವನ್ನು ಹೆಚ್ಚಿಸುವ ನಿಟ್ಟಿನಲ್ಲಿ ಕಾರ್ಯಪ್ರವೃತ್ತರಾಗುವಂತೆ ಇಂಧನ ಇಲಾಖೆಯ ಹೆಚ್ಚುವರಿ ಮುಖ್ಯ ಕಾರ್ಯದರ್ಶಿ ಗೌರವ್ ಗುಪ್ತ ಸೆಸ್ಕ್ ಅಧಿಕಾರಿಗಳಿಗೆ ಸೂಚಿಸಿದರು.

ನಗರದ ಹೊರವಲಯದ ಕಡಕೊಳದಲ್ಲಿರುವ ಕೆಇಬಿ ಎಂಜಿನಿಯರ್ ಗಳ ಸಂಘದ ಸಭಾಂಗಣದಲ್ಲಿ ಸೋಮವಾರ ನಡೆದ ಸೆಸ್ಕ್ ಪ್ರಗತಿ ಪರಿಶೀಲನಾ ಸಭೆಯಲ್ಲಿ ಅವರು ಮಾತನಾಡಿದರು.

ವಿದ್ಯುತ್ ವಿತರಣೆಯಲ್ಲಿ ಏರಿಕೆ ಕಂಡುಬಂದರೆ ಆದಾಯವೂ ಹೆಚ್ಚಾಗಬೇಕಿದೆ. ಹೀಗಾಗಿ ಸರ್ಕಾರದ ಯೋಜನೆಗಳನ್ನು ಯಶಸ್ವಿಯಾಗಿ ಅನುಷ್ಠಾನಗೊಳಿಸುವುದು, ಗ್ರಾಹಕರಿಗೆ ಅಡಚಣೆರಹಿತ ವಿದ್ಯುತ ಪೂರೈಕೆ ಮಾಡುವುದರ ಜತೆಗೆ, ಕಂದಾಯ ಸಂಗ್ರಹದ ಮೇಲೂ ಹೆಚ್ಚಿನ ಗಮನಹರಿಸಬೇಕಿದೆ. ಗಂಗಾ ಕಲ್ಯಾಣ ಯೋಜನೆ



ಅನುಷ್ಠಾನದಲ್ಲಿ ವಿಳಂಬ ಆಗದಂತೆ ನೋಡಿಕೊಳ್ಳಬೇಕು. ಕುಡಿಯುವ ನೀರಿನ ಪೂರೈಕೆಗೂ ಸಮಸ್ಯೆ ಆಗದಂತೆ ಎಚ್ಚರವಹಿಸಬೇಕಿದೆ ಎಂದ ಅವರು, ವಿಭಾಗ ಹಾಗೂ ಉಪ ವಿಭಾಗಕ್ಕೆ ಭೇಟಿ ನೀಡಿ ನೈಜ ಪರಿಸ್ಥಿತಿ ಅರಿತುಕೊಳ್ಳಿ ಎಂದು ಸೆಸ್ಕ್ ಎಂಡಿ ಅವರಿಗೆ ಸಲಹೆ ನೀಡಿದರು.

ಸೆಸ್ಕ್ ವ್ಯವಸ್ಥಾಪಕ ನಿರ್ದೇಶಕೆ ಎಂ.ಎಸ್. ಅರ್ಚನಾ ಮಾತನಾಡಿ, ಕುಸುಮ್-ಬಿ ಯೋಜನೆ ನಿಧಾನ ಗತಿಯಲ್ಲಿ ಪ್ರಗತಿ ಕಾಣುತ್ತಿದೆ.

ಕುಸುಮ್-ಸಿ ಯೋಜನೆಯಲ್ಲಿ ಕೆಲವು ಕಡೆಗಳಲ್ಲಿ ಕೃಷಿ ಇಲಾಖೆಯ ಭೂಮಿ ಗುರುತಿಸಲಾಗಿದ್ದು, ಕೆಲವು ರೈತರು ನಿಗದಿಗಿಂತಲೂ ಹೆಚ್ಚಿನ ಲೀಸ್ (ಭೋಗ್ಯ) ಮೊತ್ತ ಕೇಳುತ್ತಿರುವುದರಿಂದ ಪ್ರಗತಿ ನಿಧಾನವಾಗಿದೆ ಎಂದು ಮಾಹಿತಿ ನೀಡಿದರು.

ಜಿಲ್ಲಾಧಿಕಾರಿ ಜಿ. ಲಕ್ಷ್ಮೀಕಾಂತ ರೆಡ್ಡಿ, ಸೆಸ್ಕ್ ತಾಂತ್ರಿಕ ನಿರ್ದೇಶಕ ಶರಣಮ್ಮ ಜಂಗಿನ, ಸೆಸ್ಕ್ ಮುಖ್ಯ ಎಂಜಿನಿಯರ್ ಎಲ್.ಲೋಕೇಶ್ ಇದ್ದರು.

400 ಕೆವಿ ಉಪ ಕೇಂದ್ರ ಪರಿಶೀಲನೆ : ಇದಕ್ಕೂ ಮುನ್ನ ಕಡಕೋಳದಲ್ಲಿ ಕೆಪಿಟಿಸಿಎಲ್ ವತಿಯಿಂದ ನಿರ್ಮಿಸುತ್ತಿರುವ 400 ಕೆವಿ ಉಪ ಕೇಂದ್ರಕ್ಕೆ ಭೇಟಿ ನೀಡಿದ ಗೌರವ್ ಗುಪ್ತ ಅವರು, ಕಾಮಗಾರಿಯ ಪ್ರಗತಿ ಪರಿಶೀಲಿಸಿದರು.

ಬಳಿಕ ಕೆಪಿಟಿಸಿಎಲ್ ಯೋಜನೆಯ ಕಾಮಗಾರಿಗಳ ಪ್ರಗತಿ ಕುರಿತು ಸಭೆ ನಡೆಸಿದ ಅವರು, ಕಡಕೋಳದಲ್ಲಿ ನಿರ್ಮಿಸುತ್ತಿರುವ 400 ಕೆವಿ ಉಪ ಕೇಂದ್ರದ ಕಾಮಗಾರಿ ನಿಗದಿತ ವೇಳೆ ಪೂರ್ಣಗೊಳ್ಳಬೇಕಿದ್ದು, ಈ ನಿಟ್ಟಿನಲ್ಲಿ ಅಧಿಕಾರಿಗಳು ಹಾಗೂ ಟೆಂಡರ್ ಪಡೆದಿರುವ ಏಜೆನ್ಸಿ ಅವರು ಹೆಚ್ಚಿನ ಕ್ರಮವವಹಿಸಬೇಕಿದೆ ಎಂದರು.

ಕೆಪಿಟಿಸಿಎಲ್ ಯೋಜನೆಗಳ ಅನುಷ್ಠಾನಕ್ಕೆ 18 ಕಡೆಗಳಲ್ಲಿ ಅಗತ್ಯವಿದ್ದ ಸರ್ಕಾರಿ, ಖಾಸಗಿ ಭೂಮಿಯನ್ನು ಕೆಪಿಟಿಸಿಎಲ್‌ಗೆ ಹಸ್ತಾಂತರಿಸುವಲ್ಲಿ ಪ್ರಮುಖ ಪಾತ್ರವಹಿಸಿದ ಜಿಲ್ಲಾಧಿಕಾರಿ ಲಕ್ಷ್ಮೀಕಾಂತ ರೆಡ್ಡಿ ಅವರ ಕಾರ್ಯವನ್ನು ಶ್ಲಾಘಿಸಿದ ಗೌರವ್ ಗುಪ್ತ ಅವರು, 400 ಕೆವಿ ಉಪ ಕೇಂದ್ರ ಹಾಗೂ ಸಂಬಂಧಿಸಿದ ಪ್ರಸರಣ ಮಾರ್ಗಗಳ ನಿರ್ಮಾಣಕ್ಕೆ ಯಾವುದೇ ಅಡಚಣೆಯಾದರೆ ಜಿಲ್ಲಾಡಳಿತ ಮತ್ತು ಪೊಲೀಸ್ ಇಲಾಖೆಯಿಂದ ಸಹಕಾರ ಪಡೆಯುವಂತೆ ಕೆಪಿಟಿಸಿಎಲ್ ಅಧಿಕಾರಿಗಳಿಗೆ ಸೂಚನೆ ನೀಡಿದರು.

ಕೆಪಿಟಿಸಿಎಲ್ ನಿರ್ದೇಶಕರು (ಯೋಜನೆ) ಗಿರಿಧರ್ ಕುಲಕರ್ಣಿ, ಅಧೀಕ್ಷಕ ಎಂಜಿನಿಯರ್ ರಮೇಶ್ ಇದ್ದರು.

ಪೌರ ಸಮಸ್ಯೆ

ಡಾ.ರಾಜ್‌ಕುಮಾರ್ ರಸ್ತೆಗೆ ಕೊನೆಗೂ ಮುಕ್ತಿ: ಅಭಿವೃದ್ಧಿ ಕಾರ್ಯ ಶುರು

ಮೈಸೂರು ನಗರದ ಪ್ರಮುಖ ರಸ್ತೆಗಳಲ್ಲಿ ಒಂದಾದ ಡಾ.ರಾಜ್‌ಕುಮಾರ್ ರಸ್ತೆಯ ವಿಸ್ತರಣೆ ಸಂಬಂಧ ಇದ್ದ ಅಡ್ಡಿ ಆತಂಕಗಳಿಗೆ ಕೊನೆಗೂ ಮುಕ್ತಿ ಸಿಕ್ಕಿದೆ. ಇದೀಗ ರಸ್ತೆಯ ವಿಸ್ತರಣಾ ಕಾರ್ಯ ಆರಂಭವಾಗಿದೆ. ಕಳೆದೊಂದು ವರ್ಷದಿಂದ ಈ ರಸ್ತೆಯ ದುರಸ್ತಿ ಸಂಬಂಧ ಶಾಸಕರು ಸೇರಿದಂತೆ ಚುನಾಯಿತ ಪ್ರತಿನಿಧಿಗಳು, ಜಿಲ್ಲಾಧಿಕಾರಿ ಹಾಗೂ ನಗರಪಾಲಿಕೆ ಅಧಿಕಾರಿಗಳನ್ನು ಭೇಟಿ ಮಾಡಿ, ಹತ್ತಾರು ಬಾರಿ ಮನವಿ ಸಲ್ಲಿಸಲಾಗಿತ್ತು. ಅಲ್ಲದೇ ಬಡಾವಣೆಯ ಪ್ರಮುಖ ನಾಗರಿಕರೊಡಗೂಡಿ ಮಾಧ್ಯಮಗೋಷ್ಠಿ ನಡೆಸಲಾಗಿತ್ತು. ಪತ್ರಿಕೆಗಳಲ್ಲೂ ಕೂಡ ಈ ವಿಷಯವನ್ನು ಪದೇ ಪದೇ ಪ್ರಸ್ತಾಪಿಸಲಾಗುತ್ತಿತ್ತು. ಇದೀಗ ವಿಸ್ತರಣಾ ಕಾರ್ಯ ಹಾಗೂ ಡಾಂಬರೀಕರಣ ನಡೆಯುತ್ತಿದೆ. ಎಲ್ಲಿಗೂ ಅಬಿನಂದನೆಗಳು

• **ಮೈಕ್ ಪ್ರಕಾಶ್, ಪ್ರಚಾರಕರ್ತರು, ಮೈಸೂರು**

ಸುದ್ದಿ ಸಿಂಚನ

ಇಂದು ಹಂಸಲೇಖ ಸಿನಿಮಾ, ಸಾಹಿತ್ಯ ಸಂವಾದ

ಮೈಸೂರು: ಲಯನ್ಸ್ ಕ್ಲಬ್ ಆಫ್ ಮೈಸೂರು ಪರಿವರ್ತನ ಕನ್ನಡ ಸಾಹಿತ್ಯ ಪರಿಷತ್ತು ಸಂಸ್ಥಾಪನಾ ದಿನದ ಅಂಗವಾಗಿ ಆಯೋಜಿಸಿರುವ ನಾಲ್ವಡಿ ನಾಡಿನಲ್ಲಿ ನಾದ ಬ್ರಹ್ಮ ಹಂಸಲೇಖ ಅವರ ಸಿನಿಮಾ ಸಾಹಿತ್ಯ ಸಂವಾದ ಕಾರ್ಯಕ್ರಮವನ್ನು ಮೇ 5ರ ಸಂಜೆ 5ಕ್ಕೆ ಜೆಎಲ್.ಬಿ ರಸ್ತೆಯಲ್ಲಿರುವ ಎಂಜಿನಿಯರುಗಳ ಸಭಾಂಗಣದಲ್ಲಿ ಹಮ್ಮಿಕೊಳ್ಳಲಾಗಿದೆ.ಗಾಯಕ, ಗೀತ ರಚನಕಾರ ಆರ್. ರವಿ ಕುಮಾರನಪುರ ಪರಿಕಲ್ಪನೆಯ ಈ ಕಾರ್ಯಕ್ರಮವನ್ನು ಹಿರಿಯ ಪತ್ರಕರ್ತ ಕೆ. ನರಸಿಂಹಮೂರ್ತಿ ಉದ್ಘಾಟಿಸಲಿದ್ದು, ಸಾಮಾಜಿಕ ಹೋರಾಟಗಾರ



ಅಹಿಂದ ಜವರಪ್ಪ ಅಧ್ಯಕ್ಷತೆ ವಹಿಸುವರು. ಹಂಸಲೇಖ ಸಾಹಿತ್ಯದಲ್ಲಿ ಪ್ರಕೃತಿ-ಪರಿಸರ ಪ್ರೇಮ ವಿಷಯವನ್ನು ಹಾಸನ ಆಕಾಶವಾಣಿ ನಿವೃತ್ತ ಮುಖ್ಯಸ್ಥ ಎಂ. ಶಿವಕುಮಾರ್, ಹಂಸಲೇಖ ಸಾಹಿತ್ಯದಲ್ಲಿ ದೇಸಿಯತೆ ಕುರಿತು ಕೃಷ್ಣಮೂರ್ತಿ ಚಮರಂ, ಹಂಸ ಲೇಖರ ಸಂಗೀತ ಮತ್ತು ಒಡನಾಟ ಕುರಿತು ಆರ್. ಮಹೇಂದರ್, ಹಂಸಲೇಖರು ಬೆಳೆದುಬಂದ ಹಾದಿ ಕುರಿತು ಗಾನಾಸುಮಾ ಪಟ್ಟಸೋಮನಹಳ್ಳಿ ಮಾತಾಡುವರು. ಸಾಹಿತಿ ಸ್ವಾಮಿ ಪೊನ್ನಾಚಿ, ಬರಹಗಾರ ರಾಘವೇಂದ್ರ ಅಪುರಾ, ಕವಿ ಮಹೇಶ್ ಇರಸವಾಡಿ, ಲಯನ್ಸ್ ಕ್ಲಬ್ ಆಫ್ ಮೈಸೂರು ಪರಿವರ್ತನ ಖಜಾಂಚಿ ಸವಿತಾ ಎಸ್. ಗೌಡ, ಎಸ್. ಸತೀಶ್, ಕರವೇ ರಾಜ್ಯ ಯುವ ಘಟಕದ ಅಧ್ಯಕ್ಷ ಸಂಜಯ್, ಜಿಲ್ಲಾಧ್ಯಕ್ಷ ಲೋಹಿತಾಶ್ವ ಸಂವಾದದಲ್ಲಿ ಭಾಗವಹಿಸಲಿದ್ದಾರೆ. ಸತೀಶ್ ಹೆಗ್ಗೂರು ಮಾತನಾಡುವರು. ಕವಯತ್ರಿ ನಂದಾದೀಪ ನಿರೂಪಿಸುವರು.

ಆನ್‌ಲೈನ್ ಮೂಲಕ ಅರ್ಜಿ

ಮೈಸೂರು: ಬೆಂಗಳೂರಿನ ಕರ್ನಾಟಕ ರಾಜ್ಯ ಸರ್ಕಾರಿ ನೌಕರರ ಸಂಘದ ವತಿಯಿಂದ ಕರ್ನಾಟಕ ರಾಜ್ಯ ಸರ್ಕಾರಿ ನೌಕರರ ಮಕ್ಕಳನ್ನು ಶೈಕ್ಷಣಿಕವಾಗಿ ಪ್ರೋತ್ಸಾಹಿಸಿ ಗೌರವಿಸುವ ಸಲುವಾಗಿ ಪ್ರತಿಭಾ ಪುರಸ್ಕಾರ ಕಾರ್ಯಕ್ರಮವನ್ನು ರಾಜ್ಯಾಧ್ಯಕ್ಷ ಸಿ.ಎಸ್. ಷಡಾಕ್ಷರಿ ಹಮ್ಮಿಕೊಂಡಿದ್ದಾರೆ. ಸದರಿ ್ರತಿಭಾ ಪುರಸ್ಕಾರಕ್ಕೆ 2026ನೇ ಸಾಲಿನ ಮಾರ್ಚ್, ಏಪ್ರಿಲ್ ನಲ್ಲಿ ಎಸ್ಸೆಸ್ಸೆಲ್ಸಿ ಅಥವಾ ದ್ವಿತೀಯ ಪಿಯುಸಿ ವಾರ್ಷಿಕ ಪರೀಕ್ಷೆಯಲ್ಲಿ ಶೇ. 90ಕ್ಕಿಂತ ಹೆಚ್ಚು ಅಂಕ ಗಳಿಸಿದ ಕರ್ನಾಟಕ ರಾಜ್ಯ ಸರ್ಕಾರಿ ನೌಕರರ ಮಕ್ಕಳ ಪೋಷಕರು https://powermedia.info ವೆಬ್ ಸೈಟ್‌ನಲ್ಲಿ ಆನ್‌ಲೈನ್ ಮೂಲಕ ಮೇ 25ರವರೆಗೆ ಅರ್ಜಿ ಸಲ್ಲಿಸಬಹುದಾಗಿದೆ. ಹೆಚ್ಚಿನ ಮಾಹಿತಿಗಾಗಿ ಜಿಲ್ಲಾಧ್ಯಕ್ಷರು ಡಾ.ಸಿ.ಬಿ. ಅರುಣಕುಮಾರ, ಮೊ.ಸಂಖ್ಯೆ 9448208750 ಸಂಪರ್ಕಿಸಬಹುದು.

ಕೌಟುಂಬಿಕ ಕಲಹ ಮುಖ್ಯಪೇದೆ ಆತ್ಮಹತ್ಯೆ

ಮೈಸೂರು: ಕೌಟುಂಬಿಕ ಕಲಹದಿಂದ ಬೇಸತ್ತು ನಗರದ ದೇವರಾಜ ಪೊಲೀಸ್ ಠಾಣೆಯ ಮುಖ್ಯಪೇದೆ ಶ್ಯಾಮಪ್ರಸಾದ್ ಎಂಬವರು ಭಾನುವಾರ ರಾತ್ರಿ ತಮ್ಮ ಮನೆಯಲ್ಲಿಯೇ ನೇಣುಬಿಗಿದುಕೊಂಡು ಆತ್ಮಹತ್ಯೆ ಮಾಡಿಕೊಂಡಿದ್ದಾರೆ. ಆಲನಹಳ್ಳಿ ಬಳಿಯ ಎಸ್‌ಟಿಪಿ ಬಡಾವಣೆಯ ನಿವಾಸಿಯಾಗಿದ್ದ ಅವರಿಗೆ 47 ವರ್ಷ ವಯಸ್ಸಾಗಿತ್ತು. ಪತ್ನಿ, ಇಬ್ಬರು ಮಕ್ಕಳಿದ್ದಾರೆ. ಕಳೆದ 20 ವರ್ಷಗಳಿಂದ ಪೊಲೀಸ್ ಇಲಾಖೆಯಲ್ಲಿ ಸೇವೆ ಸಲ್ಲಿಸುತ್ತಿದ್ದರು. ಆಲನಹಳ್ಳಿ ಠಾಣೆ ಪೊಲೀಸರು ಪ್ರಕರಣ ದಾಖಲಿಸಿಕೊಂಡು ಮುಂದಿನ ತನಿಖೆ ನಡೆಸುತ್ತಿದ್ದಾರೆ.

ಸರ್ಕಾರಿ ಮುದ್ರಣಾಲಯದಲ್ಲಿ ಡಾ.ಅಂಬೇಡ್ಕರ್ ಜಯಂತಿ

• **ಕನ್ನಡಪ್ರಭ ವಾರ್ತೆ** ಮೈಸೂರು

ಸರಸ್ವತಿಪುರಂನಲ್ಲಿರುವ ಸರ್ಕಾರಿ ವಿಭಾಗೀಯ ಮುದ್ರಣಾಲಯದಲ್ಲಿ ಸೋಮವಾರ ಸಂವಿಧಾನ ಶಿಲ್ಪಿ ಡಾ.ಬಿ.ಆರ್. ಅಂಬೇಡ್ಕರ್‌ಅವರ 135ನೇ ಜನ್ಮದಿನವನ್ನು ಆಚರಿಸಿತು.

ಅಂಬೇಡ್ಕರ್‌ಪುತ್ಥಳಿಗೆ ಪುಷ್ಪಾರ್ಚನೆ ಮಾಡಿ ಕೆಪಿಸಿಸಿ ಸಂಯೋಜಕ, ಸಂವಿಧಾನ ಸಂರಕ್ಷಣಾ ಹೋರಾಟ ಸಮಿತಿ ರಾಜ್ಯಾಧ್ಯಕ್ಷ ಎನ್. ಭಾಸ್ಕರ್‌ಮಾತನಾಡಿ, ಅಂಬೇಡ್ಕರ್‌ಅವರ ಬರೆದ ಸಂವಿಧಾನವನ್ನು ನಾಶಪಡಿಸಲು ಮನುವಾದಿ, ಕೋಮುವಾದಿಗಳು ಮುಂದಾಗಿದ್ದು, ಸಂವಿಧಾನ ರಕ್ಷಣೆಗೆ ಎಲ್ಲರೂ ಪಣತೊಡಬೇಕಿದೆ. ಭಾರತ ಒಂದು ರಾಷ್ಟ್ರವಾಗಿ ಉಳಿಯಬೇಕಾದರೆ ಸಂವಿಧಾನವನ್ನು ಉಳಿಸಬೇಕಿದೆ ಎಂದು ಹೇಳಿದರು.

ಸ್ವಾತಂತ್ರ್ಯ ಪೂರ್ವದಲ್ಲಿ ಕ್ವಿಟ್ ಇಂಡಿಯಾ ಚಳವಳಿ ಆರಂಭಕ್ಕೂ ತಿಂಗಳ ಮೊದಲು ವೈಸರಾಯ್ ಅವರು ರಚಿಸಿದ ಕಾರ್ಮಿಕ ಮಂಡಳಿಯಲ್ಲಿ ಅಂಬೇಡ್ಕರ್ ಸದಸ್ಯರಾಗಿ ನೇಮಕಗೊಳ್ಳುತ್ತಾರೆ. ಕಾರ್ಮಿಕ ವರ್ಗಗಳ ಕಲ್ಯಾಣಕ್ಕೆ ಹಲವು ಮಾರ್ಗಸೂಚಿಗಳನ್ನು



ಪರಿಚಯಿಸುತ್ತಾರೆ. ಅಂಬೇಡ್ಕರ್‌ಅವರು ಕಾರ್ಮಿಕರ ಹಕ್ಕು ಮತ್ತು ಕಲ್ಯಾಣಕ್ಕಾಗಿ ಅವಿತರವಾಗಿ ಶ್ರಮಿಸಿದ ಮಹಾನ್ ನಾಯಕ ಎಂದರು.

ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷ ಡಾ.ಬಿ.ಜೆ. ವಿಜಯಕುಮಾರ್‌ಮಾತನಾಡಿ, ಡಾ.ಬಿ.ಆರ್. ಅಂಬೇಡ್ಕರ್ ಜಯಂತಿಯನ್ನು ಎಸ್ಸಿ, ಎಸ್ಟಿ ಜನರು ಆಚರಿಸಬೇಕು. ಉಳಿದವರು ಆಚರಿಸಬಾರದು ಎಂಬುದು ದೇಶದ್ರೋಹದ ಕೆಲಸ. ಅಂಬೇಡ್ಕರ್ ಜಯಂತಿಯನ್ನು ಎಲ್ಲ ಜಾತಿಯ ಜನರು ಸೇರಿ ಆಚರಿಸಬೇಕು ಎಂದು ತಿಳಿಸಿದರು.

ಹೆಚ್ಚುವರಿ ಜಿಲ್ಲಾ ಸರ್ಕಾರಿ ವಕೀಲ ತಿಮ್ಮಯ್ಯ, ವಕೀಲ ಕಾಂತರಾಜ್, ಸರ್ಕಾರಿ ವಿಭಾಗೀಯ ಮುದ್ರಣಾಲಯದ ಉಪ ನಿರ್ದೇಶಕಿ ಜ್ಯೋತಿ ಮಾತನಾಡಿದರು.

ಸರ್ಕಾರಿ ವಿಭಾಗೀಯ ಮುದ್ರಣಾಲಯದ ಅಧೀಕ್ಷಕಿ ಶೈಲಜಾ, ಕರ್ನಾಟಕಭೀಮಸೇನೆಅಧ್ಯಕ್ಷಮಂಜುನಾಥ್, ಮುಖಂಡರಾದ ಶಿವಪ್ರಸಾದ್, ಜಿ. ಮಹಾದೇವ್, ಮಂಜುನಾಥ್, ಸರ್ಕಾರಿ ಎಸ್ಸಿ, ಎಸ್ಟಿ ನೌಕರರ ಜಿಲ್ಲಾ ಸಂಘದ ಖಜಾಂಚಿ ಮಹದೇವಸ್ವಾಮಿ, ಸರ್ಕಾರಿ ವಿಭಾಗೀಯ ಮುದ್ರಣಾಲಯದ ಎಸ್ಸಿ, ಎಸ್ಟಿ ನೌಕರರ ಸಂಘದ ಕಾರ್ಯದರ್ಶಿ ಜೆ. ಪ್ರಭು ಇದ್ದರು.

20ರಂದು ಶಿವಶರಣೆ ಹೇಮರಡ್ಡಿ ಮಲ್ಲಮ್ಮ ಜಯಂತಿ

• **ಕನ್ನಡಪ್ರಭ ವಾರ್ತೆ** ಮೈಸೂರು

ನಗರದಲ್ಲಿ ಮೇ 20 ರಂದು ಶಿವಶರಣೆ ಹೇಮರಡ್ಡಿ ಮಲ್ಲಮ್ಮ ಅವರ ಜಯಂತಿಯನ್ನು ಅರ್ಥಪೂರ್ಣವಾಗಿ ಆಚರಿಸಲು ಸಿದ್ಧತೆ ಮಾಡಿಕೊಳ್ಳುವಂತೆ ಹೆಚ್ಚುವರಿ ಜಿಲ್ಲಾಧಿಕಾರಿ ಆರ್. ಐಶ್ವರ್ಯ ತಿಳಿಸಿದರು.

ಜಿಲ್ಲಾಧಿಕಾರಿ ಕಚೇರಿಯ ಸಭಾಂಗಣದಲ್ಲಿ ಸೋಮವಾರ ನಡೆದ ಪೂರ್ವಭಾವಿ ಸಭೆಯ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿ,

ಅಂದು ಬೆಳಗ್ಗೆ 11.30ಕ್ಕೆ ಕಲಾಮಂದಿರಷ ಕಿರು ರಂಗಮಂದಿರದಲ್ಲಿ ಕಾರ್ಯಕ್ರಮ ನಡೆಯಲಿದೆ. ವೇದಿಕೆ ಕಾರ್ಯಕ್ರಮಕ್ಕೂ ಮೊದಲು ಗೀತಾ ಗಾಯನ ಏರ್ಪಡಿಸಲಾಗುವುದು. ಸಮುದಾಯದ ಮುಖಂಡರ ಸಲಹೆಯಂತೆ ಸೂಚಿಸುವ ವ್ಯಕ್ತಿಯನ್ನು ಸಾನ್ನಿಧ್ಯ ಹಾಗೂ ವಿಶೇಷ ಉಪನ್ಯಾಸ ನೀಡಲು ಆಹ್ವಾನಿಸಲಾಗುವುದು ಎಂದರು.

ಜಯಂತಿಗಳ ಆಚರಣೆ ಕೇವಲ ಒಂದು ಸಮುದಾಯಕ್ಕೆ ಸೀಮಿತವಲ್ಲ. ಎಲ್ಲಾ ಸಮುದಾಯದವರು ಸೇರಿ ಜಯಂತಿಗಳ ಆಚರಣೆ ಮಾಡಬೇಕು. ಜಯಂತಿಗಳ ಆಚರಣೆಯ ಉದ್ದೇಶ ಮಹನೀಯರ ಆದರ್ಶಗಳನ್ನು ಪಾಲನೆ ಮಾಡುವುದು ಆಗಿದೆ. ಮಹನೀಯರ ತತ್ವ ಆದರ್ಶಗಳನ್ನು ಗುಣಗಳನ್ನು ನಾವೆಲ್ಲರೂ ಅಳವಡಿಸಿಕೊಳ್ಳಬೇಕು ಎಂದು ಅವರು ತಿಳಿಸಿದರು.



ವೇದಿಕೆಯ ಮೇಲೆ ಗಣ್ಯರಿಗೆ ಹೂ ಗುಚ್ಚ ನೀಡಿ ಸ್ವಾಗತ ಮಾಡುವ ಬದಲು ಆಯಾ ಜಯಂತಿಗಳಲ್ಲಿ ಆಯ ಮಹನೀಯರ ಜೀವನ ಚರಿತ್ರೆ ಕುರಿತ ಪುಸ್ತಕಗಳನ್ನು ನೀಡಿ ಸ್ವಾಗತ ಮಾಡಬೇಕು ಎಂದು ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಅಧಿಕಾರಿಗಳಿಗೆ ಸೂಚಿಸಿದರು.

ಜಯಂತಿಗಳು ನಡೆಯುವ ಸ್ಥಳದ ಸ್ವಚ್ಛತೆ ಹಾಗೂ ಕುಡಿಯುವ ನೀರಿನ ವ್ಯವಸ್ಥೆ, ತಳಿರು ತೋರಣ, ಹಾಗೂ ಶಾಮಿಯಾನ ವ್ಯವಸ್ಥೆಯನ್ನು ಮೈಸೂರು ಮಹಾನಗರ ಪಾಲಿಕೆಯ ವತಿಯಿಂದ ಮಾಡಬೇಕು. ಮಹಾನಗರ ಪಾಲಿಕೆಯ ಅಧಿಕಾರಿಗಳಿಗೆ ಸೂಚನೆ ನೀಡಿದರು.

ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಹಾಯಕ ನಿರ್ದೇಶಕ ಡಾ. ಸುದರ್ಶನ್ ಮಾತನಾಡಿ, ಜಯಂತಿಗಳ ಆಚರಣೆಗೆ ಶಿಷ್ಟಾಚಾರದಂತೆ ಆಮಂತ್ರಣ ಪತ್ರಿಕೆ ಮುದ್ರಿಸಿ ಜನಪ್ರತಿನಿಧಿಗಳಿಗೆ ಮುಖಂಡರಿಗೆ ಆಹ್ವಾನ ನೀಡಲಾಗುವುದು. ಕಲಾಮಂದಿರದಲ್ಲಿ ಗೀತಾ ಗಾಯನ ಏರ್ಪಡಿಸಲಾಗುವುದು ಎಂದು ತಿಳಿಸಿದರು.

ಸಮುದಾಯದ ಮುಖಂಡರು ಮಾತನಾಡಿ, ಜಯಂತಿಯ ಆಚರಣೆಯ ಸಾನ್ನಿಧ್ಯಕ್ಕೆ ತಮ್ಮ ಸಮುದಾಯದ ಸ್ವಾಮೀಜಿಗಳ ಹೆಸರನ್ನು ಆಯ್ಕೆ ಮಾಡಿ ಒಂದೆರಡು ದಿನಗಳಲ್ಲಿ ನೀಡಲಾಗುವುದು. ಜಯಂತಿಯಲ್ಲಿ ವಿಶೇಷ ಉಪನ್ಯಾಸ ನೀಡಲು ಸಂಪನ್ಮೂಲ ವ್ಯಕ್ತಿಗಳನ್ನು ಆಯ್ಕೆ ಮಾಡಿ ಹೆಸರನ್ನು ನೀಡಲಾಗುವುದು ಎಂದು ಸಮುದಾಯದ ಮುಖಂಡರು ಸಭೆಗೆ ಮಾಹಿತಿ ನೀಡಿದರು.

ಸಭೆಯಲ್ಲಿ ವಿವಿಧ ಇಲಾಖೆಗಳ ಅಧಿಕಾರಿಗಳು ಹಾಗೂ ಶಿವಶರಣೆ ಹೇಮರಡ್ಡಿ ಮಲ್ಲಮ್ಮ ಸಮುದಾಯದ ಮುಖಂಡರು ಇದ್ದರು.

ಮಂತ್ರ ಮಹರ್ಷಿ ಶ್ರೀಗಳವರ 141ನೇ ಜಯಂತಿ



• **ಕನ್ನಡಪ್ರಭ ವಾರ್ತೆ** ಸುತ್ತೂರು

ಸುತ್ತೂರು ಮಠದ 22ನೇ ಪೀಠಾಧಿಪತಿಗಳಾಗಿದ್ದ ಮಂತ್ರಮಹರ್ಷಿ ಶ್ರೀ ಶಿವರಾತ್ರೀಶ್ವರ ಸ್ವಾಮೀಜಿಗಳ 141ನೇ ಜಯಂತಿ ಮಹೋತ್ಸವದ ಪ್ರಯುಕ್ತ ಸೋಮವಾರ ಶ್ರೀಗಳವರ ಗದ್ದುಗೆಯಲ್ಲಿ ರುದ್ರಾಭಿಷೇಕ, ಅಷ್ಟೋತ್ತರ ಸಮೇತ ವಿಶೇಷ ಪೂಜೆ ನೆರವೇರಿತು. ವಿದ್ಯಾರ್ಥಿಗಳಿಗೆ ವಿದ್ಯಾರ್ಥಿನಿಲಯದಲ್ಲಿ, ಭಕ್ತಾದಿಗಳು, ಸಾರ್ವಜನಿಕರಿಗೆ ದಾಸೋಹಭವನದಲ್ಲಿ ವಿಶೇಷ ಪ್ರಸಾದ ಏರ್ಪಡಿಸಲಾಗಿತ್ತು.

ನಾಳೆ ಮೈಸೂರಿಗೆ ಸಿಎಂ ಸಿದ್ದರಾಮಯ್ಯ

• **ಕನ್ನಡಪ್ರಭ ವಾರ್ತೆ** ಮೈಸೂರು

ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಮೇ 6 ರಂದು ಬೆಳಗ್ಗೆ 10.55ಕ್ಕೆ ವಿಶೇಷ ವಿಮಾನದಲ್ಲಿ ಮೈಸೂರಿಗೆ



ಆಗಮಿಸುವರು. ಕಲಾಮಂದಿರದಲ್ಲಿ ನಡೆಯುವ ರಾಜ್ಯಮಟ್ಟದ ಶ್ರೀ ಸಿದ್ದರಾಮೇಶ್ವರ ಜಯಂತಿಯಲ್ಲಿ ಪಾಲ್ಗೊಳ್ಳುವರು. ಸಂಜೆ ಖಾಸಗಿ ಕಾರ್ಯಕ್ರಮದಲ್ಲಿ ಭಾಗವಹಿಸಿ, ನಗರದಲ್ಲಿಯೇ ವಾಸ್ತವ್ಯ ಮಾಡುವ ಅವರು ಮೇ 7 ರಂದು ಬೆಳಗ್ಗೆ 11ಕ್ಕೆ ವಿಶೇಷ ವಿಮಾನದಲ್ಲಿ ಬೆಂಗಳೂರಿಗೆ ತೆರಳುವರು.

ವೈವಿಧ್ಯಮಯ ನೃತ್ಯ, ನಾಟಕ, ಸಂಗೀತ ಕಾರ್ಯಾಗಾರ



• **ಕನ್ನಡಪ್ರಭ ವಾರ್ತೆ** ಮೈಸೂರು

ಕಲಾಧಾರೆ ಕಲ್ಚರಲ್ ಟ್ರಸ್ಟ್, ಮಾಸ್ಟರ್ ಎನ್ ಬ್ಲಾಸ್ಟರ್ ಡ್ಯಾನ್ಸ್ ಗ್ರೂಪ್ ಪ್ರದರ್ಶಕ ಕಲೆಗಳ ತರಬೇತಿ ಸಂಸ್ಥೆಯಿಂದ ಅಂತಾರಾಷ್ಟ್ರೀಯ ನೃತ್ಯ ದಿನದ ಅಂಗವಾಗಿ ವೈವಿಧ್ಯಮಯ ನೃತ್ಯ, ನಾಟಕ, ಸಂಗೀತ ಕಾರ್ಯಾಗಾರವನ್ನು ಹಿರಿಯ ರಂಗಕರ್ಮಿ ರಾಜಶೇಖರ ಕದಂಬ ಉದ್ಘಾಟಿಸಿದರು

ನಂತರ ಅವರು ಮಾತನಾಡಿ, ಕೆಲವು ಕಲಾವಿದರು ತಮ್ಮ ಕಲಾ ಪ್ರದರ್ಶನವನ್ನು ಈ ಕಾರ್ಯಾಗಾರದಲ್ಲಿ ನೋಡಿ ತುಂಬಾ ಸಂತೋಷವಾಯಿತು. ಅದರಲ್ಲೂ 75 ವರ್ಷದ ಕಲಾವಿದೆಯೂ ಈ ಕಾರ್ಯಾಗಾರಕ್ಕೆ ಬಂದಿರುವುದು ಅವರು ಕಲೆಗೆ ನೀಡುವ ಗೌರವ ತಿಳಿಯುತ್ತದೆ ಎಂದರು.

ತಮ್ಮ ಅಂದಿನಿಂದ ಇಂದಿನವರೆಗೂ ನಾಟಕ, ಚಲನಚಿತ್ರ, ಧಾರಾವಾಹಿಯಲ್ಲಿ ಅಭಿನಯ, ನಿರ್ದೇಶನ ಹಾಗೂ ವಿಶೇಷವಾಗಿ ಡಾ. ರಾಜಕುಮಾರ್ ಅವರ ಒಡನಾಟದ ಬಗ್ಗೆ, ಸುಂದರಕೃಷ್ಣ ಅರಸ್, ಇಂದಿನ ಯುವ ನಟರ ಜೊತೆ ಅಭಿನಯ, ನಿರ್ದೇಶಕರ ಜೊತೆ ಬಾಂಧವ್ಯ, ಅನುಭವದ ಒಡನಾಟವನ್ನು ಪೋಷಕರು ಹಾಗೂ ವಿದ್ಯಾರ್ಥಿಗಳ ಜೊತೆ ಹಂಚಿಕೊಂಡರು.

ಜಿಲ್ಲಾ ಸಾಹಿತ್ಯ ಪರಿಷತ್ತಿನ ಅಧ್ಯಕ್ಷ ಮಡ್ಡಿಕೇರಿ ಗೋಪಾಲ್ ಮಾತನಾಡಿ, ಶೈಕ್ಷಣಿಕವಾಗಿ ಓದುವುದರ ಜೊತೆಗೆ, ಸಾಮಾಜಿಕವಾಗಿಯೂ, ಸಾಂಸ್ಕೃತಿಕ ಚಟುವಟಿಕೆಗಳಲ್ಲಿಯೂ ತೊಡಗಿಸಿಕೊಳ್ಳಬೇಕು ಎಂದರು.

ನೃತ್ಯ ನಿರ್ದೇಶಕ ಚಾಮರಾಜ್ ಮಾತನಾಡಿ, ನಾನು 25 ವರ್ಷಗಳಿಂದ ನೃತ್ಯ ಕಲೆಯನ್ನು ನಂಬಿ, ಸಂಸ್ಥೆಯನ್ನು ಮುನ್ನಡೆಸುವುದರ ಜೊತೆ ಜೊತೆಯಲ್ಲಿ ಜೀವನ ನಡೆಸುತ್ತಿದ್ದೇನೆ. ಇಲ್ಲಿಯವರೆಗೂ ಸಾವಿರಾರು ವಿದ್ಯಾರ್ಥಿಗಳಿಗೆ ನೃತ್ಯ ತರಬೇತಿ ನೀಡಿದ್ದೇನೆ ಎಂದರು.

ಸಂಸ್ಥೆಯ ವತಿಯಿಂದ ಆಯೋಜಿಸುತ್ತಿರುವ 4 ವರ್ಷ ಮೇಲ್ಪಟ್ಟವರಿಗೆ ನೃತ್ಯ ನಾಟಕ, ಸಂಗೀತ ಕಾರ್ಯಾಗಾರದಲ್ಲಿ ಭಾಗವಹಿಸಿ ಸದುಪಯೋಗ ಪಡಿಸಿಕೊಳ್ಳಿ ಎಂದರು.

ಬೇಬಿ ಸಾನಿಧ್ಯರಾಜ್ ಪ್ರಾರ್ಥಿಸಿದರು. ಸಂಸ್ಥೆಯ ಮಹೇಶ್ ಜೈನ್ ನಿರೂ ಪಿಸಿ, ಸ್ವಾಗತಿಸಿದರು. ನೃತ್ಯ ನಿರ್ದೇಶಕ ಚಾಮರಾಜ್ ವಿದ್ಯಾರ್ಥಿಗಳಿಗೆ ಶುಭ ಹಾರೈಸಿದರು. ಸಂಸ್ಥೆಯ ಬಸಂತಕುಮಾರ್, ಮಂಗಳಗೌರಿ, ಕಾರ್ಯದರ್ಶಿ ಜ್ಯೋತಿ ಚಾಮರಾಜ್, ವಿದ್ಯಾರ್ಥಿಗಳು, ಪೋಷಕರು ಭಾಗವಹಿಸಿದ್ದರು.



ನೆಲಮಂಗಲ ಪವಾಡಶ್ರೀ ಬಸವಣ್ಣದೇವರ ಮಠದಲ್ಲಿ ನಡೆದ ಬಸವ ಜಯಂತಿ ಕಾರ್ಯಕ್ರಮದಲ್ಲಿ ಶರಣು ವಿಶ್ವವಚನ ಫೌಂಡೇಷನ್ ಸಂಸ್ಥಾಪಕ ವಚನ ಕುಮಾರಸ್ವಾಮಿ ಮತ್ತು ರೂಪ ಕುಮಾರಸ್ವಾಮಿ ಅವರ ಪುತ್ರಿ ಸಿ.ಕೆ. ವಚನಾ ವಚನ ನೃತ್ಯ ಪ್ರದರ್ಶಿಸಿದರು.

ಕನಕಗಿರಿ ಸುತ್ತಮುತ್ತ ಒಳಚರಂಡಿ ಸಮಸ್ಯೆಗೆ ಶೀಘ್ರದಲ್ಲಿ ಮುಕ್ತಿ

ಮಾಜಿ ಶಾಸಕ ಎಂ.ಕೆ. ಸೋಮಶೇಖರ್ ಭರವಸೆ



• **ಕನ್ನಡಪ್ರಭ ವಾರ್ತೆ** ಮೈಸೂರು

ಕನಕಗಿರಿ, ಮುನೇಶ್ವರನಗರ, ಹೊಸಬೀದಿ ಭಾಗಗಳಲ್ಲಿ ನಿರಂತರವಾಗಿ ಉಂಟಾಗುತ್ತಿದ್ದ ಒಳಚರಂಡಿ ಸಮಸ್ಯೆಯನ್ನು ಪರಿಹರಿಸುವುದಾಗಿ ಮಾಜಿ ಶಾಸಕ ಎಂ.ಕೆ. ಸೋಮಶೇಖರ್ ತಿಳಿಸಿದರು.

ಕೆ.ಆರ್. ಕ್ಷೇತ್ರದ ಸಮಸ್ಯೆಯನ್ನು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಗಮನಕ್ಕೆ ತಂದಿದ್ದು, ಅನುದಾನ ಬಿಡುಗಡೆಯಾಗಿದೆ. ಕೂಡಲೇ ಈ ಸಮಸ್ಯೆ ಬಗೆಹರಿಯಲಿದೆ ಎಂದರು.

ಈ ಭಾಗಗಳಲ್ಲಿ ನಿರಂತರವಾಗಿ ಉಂಟಾಗುತ್ತಿದ್ದ ಒಳಚರಂಡಿ ಸಮಸ್ಯೆಯನ್ನು ಶುಕ್ರವಾರ ಖುದ್ದು ಅಧಿಕಾರಿಗಳು ಮತ್ತು ನಿವಾಸಿಗಳ ಸಮ್ಮುಖದಲ್ಲಿ ಒಳಚರಂಡಿ ಕಾಮಗಾರಿ ಹೇಗೆ ಆಗಬೇಕು, ಏನೇನು ಲೋಪದೋಷಗಳಿವೆ, ಹೇಗೆ ಸರಿಪಡಿಸಬೇಕು, ಮಳೆಗಾಲದಲ್ಲಿ ಉಂಟಾಗುವ ಸಮಸ್ಯೆಗಳೇನು ಎಂಬುದನ್ನು ಸ್ಥಳದಲ್ಲೇ ಪರಿಶೀಲಿಸಿ ಪರಿಹಾರ ಕಂಡುಕೊಳ್ಳಬೇಕು ಹಾಗೂ ಯಾವ ನಿವಾಸಿಗಳಿಂದಲೂ ಯಾವುದೇ ಕಾರಣಕ್ಕೂ ಹಣ ಪಡೆಯದೇ ಪ್ರತೀ ಮನೆಯಿಂದಲೂ ಮುಖ್ಯ ಪೈಪ್ ಗೆ ಸಂಪರ್ಕ ಕೊಳವೆ ಅಳವಡಿಸಿ ಉತ್ತಮವಾಗಿ ಕಾಮಗಾರಿ ಮಾಡಿ ಅನುಕೂಲ ಮಾಡಿಕೊಡಬೇಕು ಎಂದು ಸೂಚಿಸಿದರು.

ಈ ವೇಳೆ ಸ್ಥಳೀಯ ಮುಖಂಡರಾದ ಶೇಖರ್, ದೀಪಕ್ ಕುಮಾರ್, ರವಿ, ಜಯಸೂರ್ಯ, ಪಾಪಣ್ಣಿ, ಮಹೇಶ್, ಬೀರೇಶ್, ನಗರ ಪಾಲಿಕೆ ವಾಣಿವಿಲಾಸ ಎಂಜಿನಿಯರ್ ಮುಸ್ತಫಾ, ರಕ್ಷಿತ್, ಗುತ್ತಿಗೆದಾರರು ಇದ್ದರು.

ಅನುಭವದ ಮಾತು | ಹಿರಿಯ ರಂಗ ನಿರ್ದೇಶಕಿ ಕೆ.ಆರ್. ಸುಮತಿ ಅಭಿಮತ | ಪ್ರತಿಭಾನ್ವಿತರಿಗೆ ಅಭಿನಂದನೆ

ಕಲೆ ಸೋತು ಗೆಲ್ಲುವುದರ ಜೊತೆಗೆ ಮಾನವೀಯತೆ ಕಲಿಸುತ್ತದೆ

• **ಕನ್ನಡಪ್ರಭ ವಾರ್ತೆ** ಮೈಸೂರು

ಕಲೆ ಸೋತು ಗೆಲ್ಲುವುದರ ಜೊತೆಗೆ, ತಾಳ್ಮೆ ಹಾಗೂ ಮಾನವೀಯತೆಯನ್ನು ಕಲಿಸುತ್ತದೆ ಎಂದು ಕಲಾವಿದರು, ಹಿರಿಯ ರಂಗ ನಿರ್ದೇಶಕಿ ಕೆ.ಆರ್. ಸುಮತಿ ಹೇಳಿದರು.

ನಗರದ ಮಹಾಜನ ಪ್ರಥಮ ದರ್ಜೆ ಕಾಲೇಜಿನ ಪ್ರತಿಭಾ ವೇದಿಕೆ ಹಾಗೂ ಐಕ್ಯೂಎಸಿ ಸಹಯೋಗದೊಂದಿಗೆ ಏರ್ಪಡಿಸಿದ್ದ ಸಮಾರಂಭದಲ್ಲಿ ಪ್ರತಿಭಾನ್ವಿತಾ ವಿದ್ಯಾರ್ಥಿಗಳಿಗೆ ಅಭಿನಂದಿಸಿ, ಪ್ರಮಾಣ ಪತ್ರ, ನೆನಪಿನ ಕಾಣಿಕೆ ಹಾಗೂ ಅಂತಿಮ ಬಿ.ಎ. ವಿದ್ಯಾರ್ಥಿನಿ ನಿಹಾರಿಕಾ ಹೆಗಡೆ ಅವರಿಗೆ ಸಮಗ್ರ ಪಾರಿತೋಷಕ ನೀಡಿ ಅವರು ಮಾತನಾಡಿದರು.

ವಿದ್ಯಾರ್ಥಿಗಳು ತಮ್ಮಲ್ಲಿರುವ ಪ್ರತಿಭೆಯನ್ನು ಪ್ರದರ್ಶಿಸಿ, ಕ್ರೀಡೆ ಮತ್ತು ಸಾಂಸ್ಕೃತಿಕ ಚಟುವಟಿಕೆಗಳಲ್ಲಿ ಆಸಕ್ತಿ ಬೆಳೆಸಿಕೊಂಡು ಸ್ವಂತ ಪರಿಶ್ರಮದಿಂದ ತೊಡಗಿಸಿಕೊಳ್ಳಬೇಕು. ಕಲೆ ಸೋತು ಗೆಲ್ಲುವುದನ್ನು ಕಲಿಸುತ್ತದೆ. ಇಂದು ಬಹುತೇಕ



ಯುವಜನಾಂಗ ಸೋಲನ್ನು ಒಪ್ಪಿಕೊಳ್ಳುವುದು ಕಷ್ಟವಾಗುತ್ತಿದೆ. ಕಾರಣ ಇಂದಿನ ಯುವ ಜನಾಂಗಕ್ಕೆ ಸಹಿಸುವ ಸಾಮರ್ಥ್ಯ ಕಡಿಮೆ ಇದೆ. ಹಾಗಾಗಿ ವಿದ್ಯಾರ್ಥಿಗಳು ನಾನಾ ರೀತಿಯ ಒತ್ತಡಗಳಿಗೆ ಒಳಗಾಗುತ್ತಾರೆ. ಪ್ರತಿಭಾ ವೇದಿಕೆ ಇಂತಹ ಒತ್ತಡಗಳನ್ನು ಸಹಿಸಿಕೊಳ್ಳುವ, ನಿರ್ವಹಿಸುವ ಸಾಮರ್ಥ್ಯವನ್ನು ಹೆಚ್ಚಿಸುತ್ತದೆ. ವಾಸ್ತವವಾಗಿ ಮನುಷ್ಯ ಸಂಘಜೀವಿ ಹಾಗಾಗಿ ವಿದ್ಯಾರ್ಥಿಗಳು ಗುಂಪಿನಲ್ಲಿ ಭಾಗವಹಿಸುವುದು ಅವರ ವ್ಯಕ್ತಿತ್ವ ವಿಕಸನದ ಬೆಳವಣಿಗೆ ದೃಷ್ಟಿಯಿಂದ ತುಂಬಾ ಮಹತ್ವದಾಗಿದೆ ಎಂದರು.

ನಾಟಕದಲ್ಲಿ ಸೋತವನ ನೋವಿನ ಅನುಭವ, ಗೆದ್ದವನ ಸಂಭ್ರಮವು ಇರುತ್ತದೆ. ಕಲೆ, ಸಾಹಿತ್ಯ ಹಾಗೂ ಕ್ರೀಡೆಗಳು ವ್ಯಕ್ತಿಯಲ್ಲಿರುವ ಮಾನವೀಯತೆಯನ್ನು ಹೆಚ್ಚಿಸುತ್ತವೆ. ಸೋತ ವಿದ್ಯಾರ್ಥಿಗಳನ್ನು ಪ್ರೋತ್ಸಾಹಿಸುವ ಮನಸ್ಥಿತಿಯನ್ನು ಅಧ್ಯಾಪಕರು ಹೊಂದಬೇಕು. ಸೋತ ವಿದ್ಯಾರ್ಥಿ ಆತ್ಮಸ್ಥೈರ್ಯವನ್ನು ಕಳೆದುಕೊಳ್ಳದೆ ಆಸಕ್ತಿ ಹಾಗೂ ಛಲದಿಂದ ಮುಂದುವರೆದರೆ ಆಗ ಇಂದಿನ ಸೋಲೆ ಮುಂದಿನ ಗೆಲುವಿಗೆ ಮೆಟ್ಟಿಲಾಗುತ್ತದೆ ಎಂದು ಅವರು ತಿಳಿಸಿದರು.

ಕಾಲೇಜಿನ ಪ್ರಾಂಶುಪಾಲೆ ಡಾ.ಬಿ.ಆರ್. ಜಯಕುಮಾರಿ ಮಾತನಾಡಿ, ಪ್ರತಿಭಾ ಪುರಸ್ಕಾರ ಪಡೆದ ವಿದ್ಯಾರ್ಥಿಗಳನ್ನು ಅಭಿನಂದಿಸಿದರು. ವಿದ್ಯಾರ್ಥಿಗಳು ತಮಗೆ ದೊರೆತ ಅವಕಾಶಗಳನ್ನು ಸದ್ಬಳಕೆ ಮಾಡಿಕೊಳ್ಳಬೇಕು. ಜೀವನದಲ್ಲಿ ಹೋರಾಟದ ಮನೋಭಾವವನ್ನು ಬೆಳಸಿಕೊಂಡರೆ ಏನನ್ನಾದರೂ ಸಾಧಿಸಬಹುದು ಎಂದು ತಿಳಿಸಿದರು. 30ಕ್ಕೂ ಹೆಚ್ಚು ಪ್ರತಿಭಾನ್ವೇಷಣಾ ಸ್ಪರ್ಧೆಗಳಲ್ಲಿ, 400ಕ್ಕೂ ಹೆಚ್ಚು ವಿದ್ಯಾರ್ಥಿಗಳು ಭಾಗವಹಿಸಿ 120 ವಿದ್ಯಾರ್ಥಿಗಳಿಗೆ ಬಹುಮಾನ ವಿತರಿಸಲಾಗಿದೆ ಎಂದರು.

ವಿದ್ಯಾಸಂಸ್ಥೆಯ ಗೌರವ ಕಾರ್ಯದರ್ಶಿ ಡಾ. ಟಿ. ವಿಜಯಲಕ್ಷ್ಮೀ ಮುರಳೀಧರ್ ಅಧ್ಯಕ್ಷತೆ ವಹಿಸಿದ್ದರು. ಸಿಇಒ ಹಾಗೂ ಶೈಕ್ಷಣಿಕ ಸಲಹೆಗಾರ ಡಾ. ಎಸ್. ಆರ್. ರಮೇಶ್, ಪ್ರತಿಭಾ ವೇದಿಕೆಯ ಸಂಚಾಲಕ ಎಂ. ನಾಗೇಶ, ಸಹ ಸಂಚಾಲಕಿ ಎನ್.ಸಿ. ಹಂಸವೇಣಿ ಇದ್ದರು.

ಪ್ರತಿಭಾ ವೇದಿಕೆಯ ಸಂಚಾಲ ಎಂ. ನಾಗೇಶ ಸ್ವಾಗತಿಸಿದರು. ಅಂತಿಮ ಬಿ.ಎಸ್ಸಿ ವಿದ್ಯಾರ್ಥಿ ಅಕ್ಷೋಭ್ಯ ಭಟ್ ಪ್ರಾರ್ಥಿಸಿದರು. ವಿಜೇತ ವಿದ್ಯಾರ್ಥಿಗಳ ಪಟ್ಟಿಯನ್ನು ದ್ವಿತೀಯ ಬಿಬಿಎ ವಿದ್ಯಾರ್ಥಿ ಪಂಚಮ್ ಓದಿದರು. ವಿದ್ಯಾರ್ಥಿಗಳ ಅನಿಸಿಕೆಯನ್ನು ಅಂತಿಮ ವರ್ಷದ ಬಿ.ಎ. ವಿದ್ಯಾರ್ಥಿನಿ ನಿಹಾರಿಕ ಹೆಗಡೆ ಮತ್ತು ಅಂತಿಮ ಬಿಸಿಎ ವಿದ್ಯಾರ್ಥಿ ಸುಮಂತ್ ಹಂಚಿಕೊಂಡರು. ಪ್ರಥಮ ಬಿ.ಎ. ವಿದ್ಯಾರ್ಥಿ ಸೃಜನ್ ನಿರೂಪಿಸಿದರು. ಪ್ರತಿಭಾ ವೇದಿಕೆಯ ಸಹ ಸಂಚಾಲಕಿ ಎನ್.ಸಿ. ಹಂಸವೇಣಿ ವಂದಿಸಿದರು. ಅಧ್ಯಾಪಕರು, ಅಧ್ಯಾಪಕೇತರರು ಹಾಗೂ ವಿದ್ಯಾರ್ಥಿಗಳು ಭಾಗವಹಿಸಿದ್ದರು.

IN THE SUPREME COURT OF INDIA EXTRA-ORDINARY APPELLATE JURISDICTION
Petition for Special Leave to Appeal (Civil) No(s) 30025-30028 OF 2024
WITH PRAYER FOR INTERIM RELIEF

HARISH KUMAR (DEAD) BY LRS AND OTHERS ....Petitioner(s)
VERSUS
THE STATE OF KARNATAKA AND OTHERS ....Respondent(s)

To,

1 **SRI.DALI MUNIYAPPA,** AGED ABOUT 65 YEARS, S/O MUNI OBALAPPA, R/A ULLAL VILLAGE, YESHWANTHPURA HOBLI, BENGALURU NORTH TALUK, BENGALURU -560110. KARNATAKA.	**PID: 98100/2026 FOR R[19] IN IN SLP(C) NO. 30025/2024, SLP(C) NO. 30026/ 2024SLP(C) NO.30025-30028/2024 (SEC IV-A)**
2 **SMT.B.V. RATHNAMMA,** AGED ABOUT 60 YEARS, D/O LATE VENKATARAMAIAH, R/A NO.33, 12TH E CROSS, MAGADI ROAD, BENGALURU-560023., KARNATAKA.	**PID: 98101/2026 FOR R[21] IN IN SLP(C) NO. 30025/2024, SLP(C) NO. 30026/ 2024SLP(C) NO.30025-30028/2024 (SEC IV-A)**
3 **SRI.H.CHANDRAKEERTHI,** AGED ABOUT 41 YEARS, S/O LATE HANUMAIAH, R/A ULLAL VILLAGE, YESHWANTHPURA HOBLI, BENGALURU NORTH TALUK, BENGALURU-560110, KARNATAKA	**PID: 98102/2026 FOR R[24] IN IN SLP(C) NO. 30025/2024, SLP(C) NO. 30026/ 2024SLP(C) NO.30025-30028/2024 (SEC IV-A)**
4 **SMT.PARVATHAMMA,** AGED ABOUT 71 YEARS, D/O LATE DASAPPA, RESIDING AT NO.36, ULLALA MAIN ROAD, OPP ULLAL LAKE, BENGALURU-560110, KARNATAKA.	**PID: 98103/2026 FOR R[34] IN IN SLP(C) NO. 30025/2024, SLP© NO. 30026/ 2024SLP(C) NO.30025-30028/2024 (SEC IV-A)**
5 **SRI.NARASIMHA MURTHY,** S/O LATE PUTTAIAH, AGED ABOUT 55 YEARS RESIDING AT NO.36, ULLALA MAIN ROAD, OPP ULLAL LAKE, BENGALURU-560110, KARNATAKA	**PID: 98104/2026 FOR R[35] IN IN SLP(C) NO. 30025/2024, SLP(C) NO. 30026/2024SLP(C) NO.30025-30028/2024 (SEC IV-A)**
6 **SRI.NARASIMHA MURTHY,** SON OF LATE MALLAIAH AGED ABOUT 63 YEARS RESIDING AT NO.36, ULLALA MAIN ROAD, OPP ULLAL LAKE, BENGALURU-560110, KARNATAKA	**PID: 98105/2026 FOR R[36] IN IN SLP(C) NO. 30025/2024SLP(C) NO.30025-30028/2024 (SEC IV-A)**
7 **V.HARISH KUMAR,** S/O LATE M.VENKATARAMAIAH, MAJOR, R/O NO.33, 13TH STREET, AGRAHARA DASARAHALLI, MAGADI ROAD, BANGALORE-560079. KARNATAKA	**PID: 98106/2026 FOR R[60] IN IN SLP(C) NO. 30027/2024SLP(C) NO.30025-30028/2024 (SEC IV-A)**
8 **R.SHOBHA,** D/O Y.RAMAKRISHNA, W/O M.C. KESHAVAMURTHY, AGED ABOUT 37 YEARS, R/A NO.11/1, 1ST MAIN, 1ST CROSS, VALMIKINAGAR, MYSORE ROAD, BANGALORE-560026 KARNATAKA.	**PID: 98107/2026 FOR R[61] IN IN SLP(C) NO. 30027/2024SLP© NO.30025-30028/2024 (SEC IV-A)**
9 **SAROJAMMA,** AGED ABOUT 77 YEARS, W/O LATE K.N SRINIVASA GUPTA. RESIDING AT NO.9, 100 FEET ROAD, BANASHANKARI, 2ND STAGE, 4TH BLOCK, BANGALORE-560083. KARNATAKA.	**PID: 98108/2026 FOR R[66] IN IN SLP(C) NO.30028/2024SLP© NO.30025-30028/2024 (SEC IV-A)**
10 **SRI. M. S MOHAN KUMAR,** ABOUT 60 YEARS, S/O LATE K.N SRINIVASA GUPTA. RESIDING AT NO.9, BANASHANKARI, 2ND STAGE, 100 FEET ROAD, 4TH BLOCK, BANGALORE-560083., KARNATAKA.	**PID: 98109/2026 FOR R[67] IN IN SLP(C) NO. 30028/2024SLP(C) NO.30025-30028/2024 (SEC IV-A)**
11 **SRI.K.S. SURENDRA BABU,** AGED ABOUT 51 YEARS, S/O LATE K.N SRINIVASA GUPTA.RESIDING AT NO.9, 100 FEET ROAD, BANASHANKARI, 2ND STAGE, 4TH BLOCK, BANGALORE-560083. KARNATAKA	**PID: 98110/2026 FOR R[68] IN IN SLP(C) NO. 30028/2024SLP(C) NO.30025-30028/2024 (SEC IV-A)**
12 **SRI.K.S VISHWAKIRAN,** AGED ABOUT 46 YEARS, S/O LATE K.N SRINIVASA GUPTA. RESIDING AT NO.9, 100 FEET ROAD, BANASHANKARI, 2ND STAGE, 4TH BLOCK, BANGALORE-560083., KARNATAKA.	**PID: 98111/2026 FOR R[69] IN IN SLP(C) NO.30028/2024SLP© NO.30025-30028/2024 (SEC IV-A)**
13 **SRI. R. V. SUDHIR,** S/O LATE RAJA VENKATARAMANA SHETTY. RESIDING AT NO.37/55, SURVEYOR ROAD, BASAVANAGUDI, BENGALURU-560004 KARNATAKA.	**PID: 98112/2026 FOR R[72] IN IN SLP(C) NO. 30028/2024SLP© NO.30025-30028/2024 (SEC IV-A)**
14 **RUDRA MURTHY** S/O H. S. SADASHIVAIAH, R/O ILLALU VILLAGE, YESWANTHAPURA HOBLI BENGALURU NORTH TALUK -560056, KARNATAKA.	**PID: 98113/2026 FOR R[77] IN IN SLP(C) NO.30028/2024SLP© NO.30025-30028/2024 (SEC IV-A)**
15 **CHANDRAN** S/O LATE NANJUNDAPPA, R/O ILLALU VILLAGE YESWANTHAPURA HOBLI, BENGALURU NORTH TALUK-560056 KARNATAKA	**PID: 98113/2026 FOR R[77] IN IN SLP(C) NO. 30028/2024SLP(C) NO.30025-30028/2024 (SEC IV-A)**
16 **NARASAPPA** S/O BASAPPA, R/O ILLALU VILLAGE YESWANTHAPURA HOBLI BENGALURU NORTH TALUK - 560056 KARNATAKA	**PID: 98115/2026 FOR R[79] IN IN SLP(C) NO.30028/2024SLP(C) NO.30025-30028/2024 (SEC IV-A)**
17 **GANGARAJU** S/O NAGARAJU, R/O ILLALU VILLAGE YESWANTHAPURA HOBLI BENGALURU NORTH TALUK – 560056. KARNATAKA	**PID: 98116/2026 FOR R[80] IN IN SLP(C) NO. 30028/2024SLP(C) NO.30025-30028/2024 (SEC IV-A)**
18 **MUDDUHAHONNAIAH** S/O JAYANNA, R/O ILLALU VILLAGE YESWANTHAPURA HOBLI BENGALURU NORTH TALUK - 560056 KARNATAKA	**PID: 98117/2026 FOR R[81] IN IN SLP(C) NO.30028/2024SLP(C) NO.30025-30028/2024 (SEC IV-A)**
19 **CHANDRAPPA** S/O LATE RAJAPPA, R/O ILLALU VILLAGE YESWANTHAPURA HOBLI BENGALURU NORTH TALUK – 560056 KARNATAKA	**PID: 98118/2026 FOR R[82] IN IN SLP(C) NO.30028/2024SLP(C) NO.30025-30028/2024 (SEC IV-A)**

WHEREAS the Petition for SPECIAL LEAVE PETITION (CIVIL) to Appeal with application for EXEMPTION FROM FILING O.T., EXEMPTION FROM FILING C/C OF THE IMPUGNED JUDGMENT, CONDONATION OF DELAY IN FILING, DISMISSAL OF APPEAL, INTERVENTION/IMPLEADMENT, EXEMPTION FROM FILING O.T., APPLICATION FOR SUBSTITUTION, EARLY HEARING APPLICATION, PERMISSION TO FILE APPLICATION FOR DIRECTION, EXEMPTION FROM APPOINTMENT OF OFFICIAL TRANSLATOR, PERMISSION TO FILE ADDITIONAL DOCUMENTS/FACTS/ANNEXURES, PERMISSION TO FILE ADDITIONAL DOCUMENTS/FACTS/ANNEXURES, EXEMPTION FROM FILING O.T., PERMISSION TO FILE APPLICATION FOR TO FILE DIRECTION, PERMISSION ADDITIONAL DOCUMENTS/FACTS/ANNEXURES above mentioned (copy enclosed) filed in the Registry by Ms. JAYASREE NARASIMHAN, Advocate on behalf of the Petitioner above named was listed for hearing before this Court on 09th December, 2024 along with the connected matters, when the Court was pleased to inter-alia pass the following order:-

"SPECIAL LEAVE PETITION (CIVIL) DIARY NO.
53577/2024
1.Delay condoned.
2. Issue notice.
3.Till the next date of hearing, the possession of the disputed property shall not be disturbed

WHEREAS, the matter was listed for hearing before this Court on 09th April, 2026 along with the connected matters, when the Court was pleased to pass the following order:-

"1. Mr. Kapil Sibal, learned senior counsel appearing for the State of Karnataka in SLP(C) No. 28248-28258/2024, submits that documents dating back to 1890 have since been traced which would prove the character of the lands in dispute as gomal'. According to him, these documents need to be placed on record since they have a material bearing on the special leave petitions under consideration.
2. Let such additional documents be placed on record by filing an appropriate application within three weeks.
3. Exception to such application may be taken by the petitioners within a week thereafter.
4. We have heard Mr. Debal Banerji, learned senior counsel appearing for K.S. Subbaraju - respondent No.7 in SLP (C) No. 30028/2024 in support of the prayer that the said petition should be dismissed.
5. Considering the submissions made by Mr. Sibal recorded above that the Government has since traced old records to the effect that disputed lands are 'gomal', we are of the considered opinion that the application seeking dismissal of SLP (C) No. 30028/2024 ought to be heard along with the special leave petitions.
6. Re-list the special leave petitions and all connected applications ca 21st May, 2026 at 12:00 noon.
7. Interim order, passed earlier, shall continue till the next date of hearing.
8. The latest office report has been read. Some of the respondents are yet to be served.
9. Fresh steps be taken by the State of Karnataka to effect service through paper publication, within two weeks from date. Notice may be published in one English daily newspaper, viz. Deccan Herald and one Kannada newspaper, viz. Kannada Prabha.
10. Once the paper publications are made, the related documents be filed before the Registry a week prior to the returnable date. Put up an appropriate office report."

NOW, THEREFORE, TAKE NOTICE that the above petition will be posted for hearing before this Court on 21st May, 2026 at 10.30 O' Clock in the forenoon or so soon thereafter as may be convenient to the Court when you may appear before the court either in person or through Counsel and show cause to the Court as to why Special Leave and interim relief as prayed for be not granted and the resultant appeal be not allowed.
You may file your affidavit in opposition to the petition as provided under Rule 14(1) of Order XXI, S.C.R.2013 immediately from the date of receipt of notice or not later than 2 weeks before the date appointed for hearing, whichever be earlier, but shall do so only by setting out the grounds in opposition to the questions of law or grounds set out in the SLPS and may produce such pleadings and documents filed before the Court/Tribunal against whose order the SLP is filed and shall also set out the grounds for not granting interim order or for vacating interim order if already granted..
TAKE FURTHER NOTICE that if you fail to enter appearance as aforesaid, no further notice shall be given to you even after the grant of special leave for hearing of the resultant appeal and the matter above mentioned shall be disposed of in your absence.
Dated: 13th April, 2026
Copy to :-
1 Mr. Anirudh Sanganeria (adv.), **2** Ms. Jayasree Narasimhan (adv.), **3** Mr. Deepak Prakash (adv.) **4** Mr. Lzafeer Ahmad B. F. (adv.), **5** Ms. Patil Rekha Chandra Gouda (adv.), **6** Ms. Smriti Churiwal (adv.), **7** Mr. Javedur Rahman (adv.), **8** Mr. Vishnu Sharma A.s. (adv.)

Sd/-
ASSISTANT REGISTRAR

DIPR/CP/496/Zen/2026-27

ಕಾವೇರಿ ನೀರಾವರಿ ನಿಗಮ ನಿಯಮಿತ
(ಕರ್ನಾಟಕ ಸರ್ಕಾರದ ಒಂದು ಉದ್ಯಮ)
ಕಾರ್ಯಪಾಲಕ ಅಭಿಯಂತರರವರ ಕಛೇರಿ, ಹೇಮಾವತಿ ನಾಲಾ ವಿಭಾಗ,
ಕಾ,ನೀ,ನಿ,ನಿ ತುಮಕೂರು

ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಪೋರ್ಟಲ್ ಅಲ್ಪಾವಧಿ ಟೆಂಡರ್ ಪ್ರಕಟಣೆ ಸಂ; 01/2026–27 ದಿನಾಂಕ: 29.04.2026

ಮಾನ್ಯ ವ್ಯವಸ್ಥಾಪಕ ನಿರ್ದೇಶಕರು, ಕಾವೇರಿ ನೀರಾವರಿ ನಿಗಮ ನಿಯಮಿತ, ಬೆಂಗಳೂರು, ರವರ ಪರವಾಗಿ ಕಾರ್ಯಪಾಲಕ ಅಭಿಯಂತರರು, ಕಾ.ನೀ.ನಿ.ನಿ, ಹೇಮಾವತಿ ನಾಲಾ ವಿಭಾಗ, ತುಮಕೂರು ವ್ಯಾಪ್ತಿಯ ರೂ:–36.51 ಲಕ್ಷ ದಿಂದ 379.40 ಲಕ್ಷದವರೆಗಿನ 02 ಕೆಲಸ ಕಾಮಗಾರಿಗಳ ಟೆಂಡರ್‌ನ್ನು ದ್ವಿ–ಲಕೋಟೆ ಪದ್ಧತಿಯಲ್ಲಿ KTPP ನಿಬಂಧನೆಗಳೊಂದಿಗೆ, ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಪೋರ್ಟಲ್ ಮೂಲಕ ಮಾತ್ರ ಆಹ್ವಾನಿಸಲಾಗಿದೆ.
ಇ–ಪೋರ್ಟಲ್‌ನಲ್ಲಿ ಆಕ್ಷೇಪಣೆಗಳಿಗೆ ಕೊನೆಯ ದಿನಾಂಕ: 06.05.2026 ಸಂಜೆ 4.00 ಗಂಟೆ ವರೆಗೆ. ಇ–ಪೋರ್ಟಲ್ ಮೂಲಕ ಟೆಂಡರ್‌ಗಳನ್ನು ಸಲ್ಲಿಸುವ ದಿನಾಂಕ: 4.05.2026 ರಿಂದ 13.05.2026 ಸಂಜೆ 4.00 ಗಂಟೆ ವರೆಗೆ ತಾಂತ್ರಿಕ ಬಿಡ್ ಇ–ಪೋರ್ಟಲ್‌ನಲ್ಲಿ ತೆರೆಯುವ ದಿನಾಂಕ:– 14.05.2026 ಸಂಜೆ 4.30ಗಂಟೆ ನಂತರ. ಆರ್ಥಿಕ ಬಿಡ್ ಇ–ಪೋರ್ಟಲ್‌ನಲ್ಲಿ ತೆರೆಯುವ ದಿನಾಂಕ:–16.05.2026 ಬೆಳಗ್ಗೆ 11.00 ಗಂಟೆ ನಂತರ (ತಾಂತ್ರಿಕ ಬಿಡ್ ಅನುಮೋದನೆಗೊಂಡ ನಂತರ).
ಇ.ಎಂ.ಡಿ ಮೊತ್ತ, ಕಾಲಾವಧಿ, ಕಾಮಗಾರಿಗಳ ವಿವರ, ಅರ್ಹತಾ ಷರತ್ತುಗಳು, ಹಾಗೂ ಇನ್ನಿತರ ವಿವರಗಳನ್ನು ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಪೋರ್ಟಲ್ ಸಿಸ್ಟಮ್ https://kppp.karnataka.gov.in/ ಮೂಲಕ ಪಡೆಯಬಹುದಾಗಿರುತ್ತದೆ.

ಸಹಿ/– ಕಾರ್ಯಪಾಲಕ ಅಭಿಯಂತರರು,
ಹೇಮಾವತಿ ನಾಲಾ ವಿಭಾಗ, ತುಮಕೂರು

DIPR/TUM/46/KSMCA/2026-27

ಆರ್.ಆರ್.ನಗರದ ನಿರೀಕ್ಷೆ ವಿಶೇಷ ಮಕ್ಕಳ ಶಾಲೆಯಲ್ಲಿ ನಿರೀಕ್ಷೆ ಉತ್ಸವ

ವಿವಿಧ ಸಾಂಸ್ಕೃತಿಕ ಕಾರ್ಯಕ್ರಮ | 21ನೇ ವಾರ್ಷಿಕ ಸಂಭ್ರಮ



• **ಕನ್ನಡಪ್ರಭ ವಾರ್ತೆ** ಮೈಸೂರು

ರಾಜರಾಜೇಶ್ವರಿ ನಗರದಲ್ಲಿರುವ ನಿರೀಕ್ಷೆ ವಿಶೇಷ ಶಾಲೆಯಲ್ಲಿ ನಡೆದ 21ನೇ ವಾರ್ಷಿಕೋತ್ಸವದ ಅಂಗವಾಗಿ ನಡೆದ ನಿರೀಕ್ಷೆ ಉತ್ಸವದಲ್ಲಿ ಶಾಲೆಯ ವಿಶೇಷ ಮಕ್ಕಳು ವಿವಿಧ ಸಾಂಸ್ಕೃತಿಕ ಕಾರ್ಯಕ್ರಮದಲ್ಲಿ ಭಾಗಿಯಾಗಿ ಸಂಭ್ರಮಿಸಿದರು.

ಪೊಲೀಸ್ ಪಬ್ಲಿಕ್ ಶಾಲೆಯ ಪ್ರಾಂಶುಪಾಲ ದೀನಾ ತಿಮ್ಮಯ್ಯ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿ, ವಿಶೇಷ ಚೇತನ ಮಕ್ಕಳನ್ನು ಸಮಾಜದ ಮುಖ್ಯವಾಹಿನಿಗೆ ತರಬೇಕು. ನಮಗೆಲ್ಲರಿಗೂ ದೇವರು ಸರಿಯಾದ ಅಂಗಾಂಗಗಳನ್ನು ನೀಡಿದ್ದಾರೆ. ಆದರೆ ಕೆಲವು ಮಕ್ಕಳಿಗೆ ನ್ಯೂನ್ಯತೆಯನ್ನು ನೀಡಿದ್ದಾರೆ. ನ್ಯೂನ್ಯತೆಯನ್ನು ಹೊಂದಿರುವ ಮಕ್ಕಳು ಸಮಾಜಕ್ಕೆ ಬಂದಾಗ ಅದು ದೌರ್ಬಲ್ಯ ಆಗದಂತೆ ಎಚ್ಚರವಹಿಸಬೇಕು ಎಂದರು.

ವಿಶೇಷ ಮಕ್ಕಳಿಗೆ ಬೇಕಾಗಿರುವುದು ಕರುಣೆಯಲ್ಲ ಕಾಳಜಿ ವಿಕಲಚೇತನ ಮಕ್ಕಳನ್ನು ನೋಡಿಕೊಳ್ಳುವ ಹೆತ್ತವರು ಮತ್ತು ಶಿಕ್ಷಣ ನೀಡುವ ಶಿಕ್ಷಕರು ಹಾಗೂ ಚಿಕಿತ್ಸೆ ನೀಡುವ ವರ್ಗಕ್ಕೆ ಹೆಚ್ಚಿನ ತಾಳ್ಮೆ ಮತ್ತು ಸಹನೆಯ ಅಗತ್ಯವಿದ್ದು ಇದನ್ನು ಮೈಗೂಡಿಸಿಕೊಳ್ಳಬೇಕಾಗಿದೆ. ವಿಕಲಚೇತನ ಮಕ್ಕಳಿಗೆ ಫಿಸಿಯೋಥೆರಫಿ ಚಿಕಿತ್ಸಾ ವಿಧಾನದಿಂದ ಶಾರೀರಿಕ ಮತ್ತು ಮಾನಸಿಕ ಬೆಳವಣಿಗೆಗಳಾಗುತ್ತಿವೆ ಎಂದು ಹೇಳಿದರು.

ಮೈಸೂರು ವಲಯ ಆರ್.ಎಫ್.ಒ ಗುರುಮೂರ್ತಿ, ಶಾಲೆಯ ಅಧ್ಯಕ್ಷ ಸವೀನ ನಂಜಪ್ಪ, ಕಾರ್ಯದರ್ಶಿ ಆನಂದ್, ಶಾಲೆಯ ಶಿಕ್ಷಕ ವೃಂದ, ಪೋಷಕರು ಇದ್ದರು.

ಗ್ರೇಟರ್ ಬೆಂಗಳೂರು ಪ್ರಾಧಿಕಾರ
ಮುಖ್ಯ ಆರೋಗ್ಯಾಧಿಕಾರಿಗಳು(ಸಾ.ಆ) ರವರ ಕಛೇರಿ, ಅನೆಕ್ಸ್ ಕಟ್ಟಡ–2, ಜಿ.ಬಿ.ಎ ಕೇಂದ್ರ ಕಛೇರಿ, ಬೆಂಗಳೂರು–02.

ಸಂಖ್ಯೆ: GBA/2025-26/IND0001-Call-3/IND0002-Call-3/ IND0003-Call-2/IND0005-Call-2 ದಿನಾಂಕ: 04.05.2026

ಟೆಂಡರ್ ಅಧಿಸೂಚನೆ

ಗ್ರೇಟರ್ ಬೆಂಗಳೂರು ಪ್ರಾಧಿಕಾರವು ಅರ್ಹ ಟೆಂಡರ್‌ದಾರರಿಂದ ಕೆಳಕಂಡ ಕಾಮಗಾರಿಗಾಗಿ ಅಲ್ಪಾವಧಿಯ ಮರು–ಟೆಂಡರ್ ಆಹ್ವಾನಿಸಲಾಗಿದ್ದು, ಜಿಬಿಎ ವ್ಯಾಪ್ತಿಯ ಐದು ಕಾರ್ಪೋರೇಷನ್‌ಗಳ ನಮ್ಮ ಕ್ಲಿನಿಕ್‌ಗಳಿಗೆ ಅಗತ್ಯವಿರುವ 243 ರೆಫ್ರಿಜಿರೇಟರ್‌ಗಳು (180–200 ಲೀಟರ್), 243 ಸೆಂಟ್ರಿಫ್ಯೂಜ್ ಯಂತ್ರಗಳು, ಲಸಿಕೆ ಸಂಗ್ರಹಣೆಗೆ ಕೋಲ್ಡ್ ಬಾಕ್ಸ್, ವ್ಯಾಕ್ಯುಟೈನರ್ ಮತ್ತು ಪಿಪೆಟ್ ಸೆಟ್‌ಗಳ ಪೂರೈಕೆಗಾಗಿ ಟೆಂಡರ್ ಆಹ್ವಾನಿಸಲಾಗಿದೆ.
ಟೆಂಡರ್ ಪ್ರಕ್ರಿಯೆಯ ವೇಳಾಪಟ್ಟಿ:

1	ಟೆಂಡರ್ ಉಲ್ಲೇಖ ಸಂಖ್ಯೆ:	GBA/2025-26/IND0001-Call-3/ IND0002-Call-3/IND0003-Call-2/IND0005-Call-2
2	ಕರ್ನಾಟಕ ಸಾರ್ವಜನಿಕ ಸಂಗ್ರಹಣೆ ಪೋರ್ಟಲ್ ವೆಬ್‌ಸೈಟ್ **http://kppp.karnataka.gov.in** ನಿಂದ ಟೆಂಡರ್ ದಾಖಲೆಯನ್ನು ಡೌನ್‌ಲೋಡ್ ಮಾಡುವ ಪ್ರಾರಂಭ ದಿನಾಂಕ.	04.05.2026 ರಿಂದ
3	ಪೂರ್ವ–ಟೆಂಡರ್ ಸಭೆಯ ದಿನಾಂಕ, ಸಮಯ ಮತ್ತು ಸ್ಥಳ:	06.05.2026 ರಂದು ಬೆಳಿಗ್ಗೆ 11:30 ಗಂಟೆಗೆ ಸ್ಥಳ: ಮುಖ್ಯ ಆರೋಗ್ಯಾಧಿಕಾರಿ ಕಛೇರಿ, ನೆಲ ಮಹಡಿ, ಅನುಬಂಧ–3 ಕಟ್ಟಡ, ಎನ್.ಆರ್.ವೃತ್ತ, ಬೆಂಗಳೂರು–560002.
4	ಕರ್ನಾಟಕ ಸಾರ್ವಜನಿಕ ಸಂಗ್ರಹಣೆ ಪೋರ್ಟಲ್‌ನಲ್ಲಿ ಆನ್‌ಲೈನ್ ಪ್ರಶ್ನೆಗಳನ್ನು ಅಪ್‌ಲೋಡ್ ಮಾಡಲು ಕೊನೆಯ ದಿನಾಂಕ ಮತ್ತು ಸಮಯ	06.05.2026 ಸಂಜೆ 5:00 ಗಂಟೆಯೊಳಗೆ
5	ಕರ್ನಾಟಕ ಸಾರ್ವಜನಿಕ ಸಂಗ್ರಹಣೆ ಪೋರ್ಟಲ್‌ನಲ್ಲಿ ಇ–ಟೆಂಡರ್ ಅಪ್‌ಲೋಡ್ ಮಾಡಲು ಕೊನೆಯ ದಿನಾಂಕ ಮತ್ತು ಸಮಯ	14.05.2026 ಸಂಜೆ 5:00 ಗಂಟೆಯೊಳಗೆ
6	ಕರ್ನಾಟಕ ಸಾರ್ವಜನಿಕ ಸಂಗ್ರಹಣೆ ಪೋರ್ಟಲ್‌ನಲ್ಲಿ ತಾಂತ್ರಿಕ ಬಿಡ್‌ಗಳನ್ನು ಆನ್‌ಲೈನ್‌ನಲ್ಲಿ ತೆರೆಯುವ ದಿನಾಂಕ ಮತ್ತು ಸಮಯ.	15.05.2026 ಸಂಜೆ 5:10 ಗಂಟೆಗೆ
7	ಮಾದರಿ ಪ್ರದರ್ಶನ ದಿನಾಂಕ ಮತ್ತು ಸಮಯ:	ತಾಂತ್ರಿಕ ಬಿಡ್ ತೆರೆಯುವಿಕೆಯ ನಂತರ ತಿಳಿಸಲಾಗುವುದು
8	ಸಂಪರ್ಕಕ್ಕಾಗಿ ವಿಳಾಸ	ಮುಖ್ಯ ಆರೋಗ್ಯಾಧಿಕಾರಿ (ಸಾರ್ವಜನಿಕ ಆರೋಗ್ಯ), ಮುಖ್ಯ ಆರೋಗ್ಯಾಧಿಕಾರಿ ಕಛೇರಿ, ನೆಲ ಮಹಡಿ, ಅನೆಕ್ಸ್ ಕಟ್ಟಡ–2, ಎನ್.ಆರ್. ವೃತ್ತ, ಬೆಂಗಳೂರು–560002. ಇ–ಮೇಲ್: choph515@gmail.com. ದೂರವಾಣಿ: 9845208571

ಈ ಟೆಂಡರ್‌ನಲ್ಲಿ ಭಾಗವಹಿಸಲು ಆಸಕ್ತ ಸೇವಾ ಪೂರೈಕೆದಾರರು ಕೆಪಿಪಿ ಪೋರ್ಟಲ್ **(https://kppp.karnataka.gov.in)** ಮೂಲಕ ಟೆಂಡರ್ ಡಾಕ್ಯುಮೆಂಟ್‌ಗಳನ್ನು ಡೌನ್‌ಲೋಡ್ ಮಾಡಿಕೊಳ್ಳಬಹುದು.

ಸಹಿ/– ಮುಖ್ಯ ಆರೋಗ್ಯಾಧಿಕಾರಿ (ಸಾರ್ವಜನಿಕ ಆರೋಗ್ಯ)
ಗ್ರೇಟರ್ ಬೆಂಗಳೂರು ಪ್ರಾಧಿಕಾರ

ಕರ್ನಾಟಕ ಸರ್ಕಾರ
ಕಾರ್ಯಪಾಲಕ ಇಂಜಿನಿಯರವರ ಕಛೇರಿ,
ಲೋಕೋಪಯೋಗಿ ಇಲಾಖೆ ವಿಭಾಗ, ಚಿತ್ರದುರ್ಗ.

ಸಂಖ್ಯೆ: ಕಾಇಂ:ಲೋವಿಚಿ:ಎಇ–2:ಟೆಂಡರ್–06:2026–27 ದಿನಾಂಕ: 04.05.2026

ಅಲ್ಪಾವಧಿ ಇ–ಟೆಂಡರ್ ಪ್ರಕಟಣೆ

ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಅಧ್ಯಾದೇಶ 2000 ಹಾಗೂ ಆಕ್ಟ್ 2000 ರ ಪ್ರಕಾರ ಸ್ಟ್ಯಾಂಡರ್ಡ್ ಟೆಂಡರ್ ಡಾಕ್ಯುಮೆಂಟ್‌ಗಳ ನಿಯಮಗಳನ್ವಯ ಕರ್ನಾಟಕ ರಾಜ್ಯ ಸರ್ಕಾರದ ರಾಜ್ಯಪಾಲರ ಪರವಾಗಿ ಕಾರ್ಯಪಾಲಕ ಇಂಜಿನಿಯರು, ಲೋಕೋಪಯೋಗಿ ಇಲಾಖೆ ವಿಭಾಗ, ಚಿತ್ರದುರ್ಗ ಇವರಿಂದ ಕರ್ನಾಟಕ ಲೋಕೋಪಯೋಗಿ ಇಲಾಖೆಯಲ್ಲಿ ನೋಂದಾಯಿತರಾದ ಅರ್ಹ ಗುತ್ತಿಗೆದಾರರಿಂದ ಕೆಪಿಪಿಪಿ ಪೋರ್ಟಲ್ ಮುಖಾಂತರ ಈ ಕೆಳಕಂಡ ಕಾಮಗಾರಿಗೆ ದ್ವಿ ಲಕೋಟೆ ಪದ್ಧತಿಯಲ್ಲಿ ಟೆಂಡರ್‌ನ್ನು ಆಹ್ವಾನಿಸಲಾಗಿದೆ.
ಅರ್ಹ ಗುತ್ತಿಗೆದಾರರು ವೆಬ್‌ಸೈಟ್ kppp.karnataka.gov.in ನಲ್ಲಿ ಟೆಂಡರ್‌ಗಾಗಿ ವಿವರಗಳನ್ನು ಪಡೆದು ಭಾಗವಹಿಸಬಹುದು.
ಕಾಮಗಾರಿಗಳ ವಿವರ:– ಕೆಪಿಪಿಪಿ ಪೋರ್ಟಲ್ ಮೂಲಕ– ದ್ವಿ ಲಕೋಟೆ ಪದ್ಧತಿ:–ಲೆಕ್ಕ ಶೀರ್ಷಿಕೆ: 3054–04–337–1–10–200 ಜಿಲ್ಲಾ ಮತ್ತು ಇತರೆ ರಸ್ತೆಗಳ ನಿರ್ವಹಣೆ :–
(1) ಹೊಸದುರ್ಗ ತಾಲ್ಲೂಕಿನ ಕಲ್ಕೆರೆಯಿಂದ ಮಲ್ಲೇನಹಳ್ಳಿ ಕ್ರಾಸ್ ಮಾರ್ಗ ಬಲ್ಲಾಳಸಮುದ್ರ ಆಲಘಟ್ಟ ಮಲ್ಲೇನಹಳ್ಳಿ ಸಂಪರ್ಕಿಸುವ ರಸ್ತೆ ಮತ್ತು ಆಲಘಟ್ಟದಿಂದ ವಡ್ಡರಹಟ್ಟಿಗೆ ಕೂಡು ರಸ್ತೆಯ ಕಿ.ಮೀ 0.00 ರಿಂದ ಕಿ.ಮೀ 2.55 (ಕಡೂರು ತಾಲ್ಲೂಕು ಗಡಿ) ವರೆಗೆ ಅಭಿವೃದ್ಧಿ ಮತ್ತು ಡಾಂಬರೀಕರಣ (ವ.ಇಂ. 34940)/4ನೇ ಕರೆ
ಅಂದಾಜು ಮೊತ್ತ (ರೂ. ಲಕ್ಷಗಳಲ್ಲಿ)120.00
ಟೆಂಡರ್ ದಿನಾಂಕಗಳು ಈ ಕೆಳಕಂಡಂತಿವೆ. ಟೆಂಡರ್ ಬಗ್ಗೆ ವಿಚಾರಿಸಲು/ಮಾಹಿತಿ ಪಡೆಯಲು ಕೊನೆಯ ದಿನಾಂಕ 08–05–2026 ಸಮಯ 17–30
ಟೆಂಡರ್ ಸಲ್ಲಿಸುವ ಅಂತಿಮ ದಿನಾಂಕ 11–05–2026 ಸಮಯ 16–00
ತಾಂತ್ರಿಕ ಬಿಡ್ ತೆರೆಯುವ ದಿನಾಂಕ ಮತ್ತು ವೇಳೆ 12–05–2026 ಸಮಯ 16–15
ಆರ್ಥಿಕ ಬಿಡ್ ತೆರೆಯುವ ದಿನಾಂಕ ಮತ್ತು ವೇಳೆ 14–05–2026 ಸಮಯ 11–00
ಹೆಚ್ಚಿನ ವಿವರಗಳಿಗೆ ಸದರಿ ಕಛೇರಿಯಿಂದ (ದೂರವಾಣಿ ಸಂಖ್ಯೆ 08194 222446) ಹಾಗೂ ಹೆಚ್.ಪಿ. ಕಂಪನಿಯ ಸಹಾಯಕ ದೂರವಾಣಿ ಸಂಖ್ಯೆ 91 9240214000 ಮತ್ತು 91 9240214001 ರಿಂದ ಮಾಹಿತಿ ಪಡೆಯಬಹುದು

DIPR/CTA/KSMCA/ 85/2026-27

ಸಹಿ/– ಕಾರ್ಯಪಾಲಕ ಅಭಿಯಂತರರು,
ಲೋಕೋಪಯೋಗಿ ಇಲಾಖೆ, ಚಿತ್ರದುರ್ಗ.

ಕರ್ನಾಟಕ ಸರ್ಕಾರ
ಅಬಕಾರಿ ಇಲಾಖೆ
ಅಬಕಾರಿ ಆಯುಕ್ತರ ಕಛೇರಿ, 2ನೇ ಮಹಡಿ, ಟಿ,ಟಿ,ಎಂ.ಸಿ. ಎ ಬ್ಲಾಕ್, ಬಿ.ಎಂ.ಟಿ.ಸಿ.ಕಟ್ಟಡ ಶಾಂತಿನಗರ, ಬೆಂಗಳೂರು–560027.

Tender No:- EXCISE/2026-27/SE0184
(https://kppp.karnataka.gov.in)

ಇ–ಟೆಂಡರ್ ಪ್ರಕಟಣೆ

ಅಬಕಾರಿ ಆಯುಕ್ತರ ಕಛೇರಿಯಲ್ಲಿ ಮಂಜೂರಾದ ಹುದ್ದೆಗಳಲ್ಲಿ ಖಾಲಿ ಇದ್ದ ಹುದ್ದೆಗಳಿಗೆದುರಾಗಿ **Non-Technical** ವಿಭಾಗದಲ್ಲಿ **(ಬೆರಳಚ್ಚುಗಾರರು(16), ವಾಹನ ಚಾಲಕರು(16), ಸ್ವಚ್ಛತಾ ಸಿಬ್ಬಂದಿ(6), ಮತ್ತು Technical ವಿಭಾಗದಲ್ಲಿ ಸಿಸ್ಟಮ್ ಅನಾಲಿಸ್ಟ್ (01) ಮತ್ತು ಜೂನಿಯರ್ ಪ್ರೋಗ್ರಾಮರ್ (02) ಸೇವೆಯನ್ನು, 2026–27ನೇ ಸಾಲಿನ ಅವಧಿಗೆ ಹೊರಗುತ್ತಿಗೆ ಆಧಾರದ ಮೇಲೆ ಕಾರ್ಮಿಕ ಇಲಾಖೆಯಲ್ಲಿ ನೋಂದಣಿಯಾಗಿರುವ ಗುತ್ತಿಗೆದಾರರಿಂದ ದ್ವಿ–ಲಕೋಟೆ ಪದ್ಧತಿಯಲ್ಲಿ (ತಾಂತ್ರಿಕ ಮತ್ತು ಆರ್ಥಿಕ ಬಿಡ್) ಟೆಂಡರ್‌ನ್ನು https://kppp.karnataka.gov.in ಪೋರ್ಟಲ್‌ನಲ್ಲಿ ಆಹ್ವಾನಿಸಲಾಗಿದ್ದು, ಇಚ್ಛೆಯುಳ್ಳ ಅರ್ಹ ಸಂಸ್ಥೆಗಳು** ಷರತ್ತು ನಿಬಂಧನೆಗಳಿಗೊಳಪಟ್ಟು ಟೆಂಡರ್ ಸಲ್ಲಿಸಬಹುದು. ಸದರಿ ಇ–ಟೆಂಡರ್ ವೇಳಾಪಟ್ಟಿ ಈ ಕೆಳಕಂಡಂತಿವೆ.
1) ಇ–ಟೆಂಡರ್ ಅಂದಾಜು ವಾರ್ಷಿಕ ಮೊತ್ತ **ರೂ. 88,25,272/–** (ಎಂಭತ್ತೆಂಟು ಲಕ್ಷದ ಇಪ್ಪತ್ತೈದು ಸಾವಿರದ ಎರಡು ನೂರ ಎಪ್ಪತ್ತೆರಡು ಮಾತ್ರ), **2)** ಇ.ಎಂ.ಡಿ ಮೊತ್ತ **ರೂ. 2,00,000/–** (ಎರಡು ಲಕ್ಷ ರೂಪಾಯಿಗಳು ಮಾತ್ರ). **3)** ಭರ್ತಿ ಮಾಡಿದ ಟೆಂಡರ್ ಫಾರಂಗಳನ್ನು ಇ–ಟೆಂಡರ್‌ನಲ್ಲಿ ಸಲ್ಲಿಸುವ ಕೊನೆಯ ದಿನಾಂಕ: **15.05.2026 ರಂದು ಸಂಜೆ 5.30** ಗಂಟೆವರೆಗೆ. **4)** ಟೆಂಡರ್ ತೆರೆಯುವ ದಿನಾಂಕ ಮತ್ತು ಸ್ಥಳ: **16.05.2026 ರಂದು ಬೆಳಿಗ್ಗೆ 11.00 ಗಂಟೆಗೆ ಅಬಕಾರಿ ಆಯುಕ್ತರ ಕಛೇರಿ, ಬೆಂಗಳೂರು,** ದೂರವಾಣಿ ಸಂಖ್ಯೆ: **080–22220302,** ಇ–ಮೇಲ್:**ecexcise@gmail.com.**
ಹೆಚ್ಚಿನ ಮಾಹಿತಿಯನ್ನು ಅಬಕಾರಿ ಆಯುಕ್ತರ ಕಛೇರಿಯ ಕೆಲಸದ ಸಮಯದಲ್ಲಿ ದೂರವಾಣಿ ಸಂಖ್ಯೆ: **080–22220302** ನ್ನು ಸಂಪರ್ಕಿಸಲು ಕೋರಿದೆ.

ವಾಸಾಸಂಇ/ವಾ.ಪ್ರ/ಶಿರಡಿ ಸಾಯಿ/500/2026–27

ಸಹಿ/–
ಅಬಕಾರಿ ಆಯುಕ್ತರ ಪರವಾಗಿ

ಕರ್ನಾಟಕ ಸರ್ಕಾರ
ಲೋಕೋಪಯೋಗಿ ಇಲಾಖೆ
ಕಾರ್ಯಪಾಲಕ ಇಂಜಿನಿಯರ್‌ರವರ ಕಛೇರಿ,
ಮೈಸೂರು ವಿಭಾಗ, ಮೈಸೂರು.
www:eepwdmys21@gmail.com
ದೂರವಾಣಿ ಸಂಖ್ಯೆ/ಫ್ಯಾಕ್ಸ್ ನಂ: 0821–2420810

ಈ ಕಛೇರಿ ಅಲ್ಪಾವಧಿ ಟೆಂಡರ್ ಪ್ರಕಟಣೆ ಸಂ:36/2025–26/2ನೇ ಕರೆ ದಿನಾಂಕ: 30.04.2026

ಕರ್ನಾಟಕ ರಾಜ್ಯಪಾಲರ ಪರವಾಗಿ ಮೈಸೂರು ಲೋಕೋಪಯೋಗಿ ಇಲಾಖೆ ವಿಭಾಗದ ಕಾರ್ಯಪಾಲಕ ಇಂಜಿನಿಯರ್ ರವರಿಂದ ಲೆಕ್ಕಶೀರ್ಷಿಕೆ: 5054–80–190–0–01–132–ಕರ್ನಾಟಕ ರಸ್ತೆ ಅಭಿವೃದ್ಧಿ ನಿಗಮ ನಿಯಮಿತ ಬಂಡವಾಳ ವೆಚ್ಚ ಅಡಿಯಲ್ಲಿ ಅನುಮೋದನೆಯಾಗಿರುವ ನಂಜನಗೂಡು ಉಪವಿಭಾಗ, ನಂಜನಗೂಡು ವ್ಯಾಪ್ತಿಯ "ನಂಜನಗೂಡು ತಾಲ್ಲೂಕು, ರಾಮನಾಥಪುರ–ತೆರಕಣಾಂಬಿ ರಾಜ್ಯ ಹೆದ್ದಾರಿ 86ರ ರಸ್ತೆಯ ಸರಪಳಿ 109.90 ರಲ್ಲಿ ಸೇತುವೆ ಮರು ನಿರ್ಮಾಣ ಕಾಮಗಾರಿ"ಗೆ ಸ್ಟ್ಯಾಂಡರ್ಡ್ ಬಿಡ್ ಡಾಕ್ಯುಮೆಂಟ್ ಕೆ.ಡಬ್ಲ್ಯೂ.4ರ ಷರತ್ತು ಮತ್ತು ನಿಯಮಗಳನ್ವಯ ಕರ್ನಾಟಕ ಸಾರ್ವಜನಿಕ ಸಂಗ್ರಹಣಾ ಪಾರದರ್ಶಕ ನಿಯಮ 2000 ರಂತೆ ದ್ವಿ–ಲಕೋಟೆ ಪದ್ಧತಿಯಲ್ಲಿ ಐಟಂವಾರು ಟೆಂಡರ್ ಪ್ರಕಟಣೆಯನ್ನು ಹೊರಡಿಸಲಾಗಿದೆ. ಕೆಪಿಪಿ ಪೋರ್ಟಲ್‌ನಲ್ಲಿ ನೊಂದಾಯಿಸಿರುವ "ಅರ್ಹ" ಲೋಕೋಪಯೋಗಿ ಗುತ್ತಿಗೆದಾರರು ಕೆಪಿಪಿ ಪೋರ್ಟಲ್‌ನಲ್ಲಿ (viz https://kppp.karnataka.gov.in/): ದಿ:30.04.2026 ರಿಂದ 08.05.2026ರ ಸಂಜೆ 17:00 ರವರೆಗೆ ಸಲ್ಲಿಸಬಹುದಾಗಿರುತ್ತದೆ. ಸದರಿ ಕಾಮಗಾರಿಯ ಇ.ಎಂ.ಡಿ ಮೊತ್ತ ರೂ.4.76 ಲಕ್ಷಗಳಾಗಿರುತ್ತದೆ. ಮತ್ತು ಪೂರ್ವಭಾವಿ ಸಭೆಯನ್ನು ದಿ:04.05.2026ರ ಬೆಳಿಗ್ಗೆ 11.00 ಗಂಟೆಗೆ ಈ ಕೆಳಗೆ ಸಹಿ ಮಾಡಿರುವವರ ಕಛೇರಿಯಲ್ಲಿ ಏರ್ಪಡಿಸಲಾಗಿದೆ. ಕಾಮಗಾರಿಗಳಿಗೆ ಸಂಬಂಧಿಸಿದಂತೆ ಹೆಚ್ಚಿನ ವಿವರಗಳು ಬೇಕಾದ್ದಲ್ಲಿ ಈ ಕೆಳಗೆ ಸಹಿ ಮಾಡಿರುವವರ ಕಛೇರಿಯಲ್ಲಿ ಕೆಲಸದ ವೇಳೆಯಲ್ಲಿ ಪಡೆಯಬಹುದಾಗಿದ್ದು, ಯಾವುದೇ ಟೆಂಡರ್‌ನ್ನು ಅಂಗೀಕರಿಸುವ/ತಿರಸ್ಕರಿಸುವ ಹಕ್ಕನ್ನು ಈ ಕೆಳಗೆ ಸಹಿ ಮಾಡಿರುವವರು ಹೊಂದಿರುತ್ತಾರೆ. ಟೆಂಡರ್ ಪ್ರಕಟಣೆಯಲ್ಲಿ ಯಾವುದೇ ತಿದ್ದುಪಡಿ ಅಥವಾ ಮಾರ್ಪಾಡುಗಳಾದಲ್ಲಿ ಕೆಪಿಪಿ ಪೋರ್ಟ್‌ಲ್ ಮೂಲಕ ಮಾತ್ರ ಪ್ರಕಟಿಸಲಾಗುವುದು.

ಸಹಿ/– ಕಾರ್ಯಪಾಲಕ ಇಂಜಿನಿಯರ್,
ಲೋಕೋಪಯೋಗಿ ಇಲಾಖೆ, ಮೈಸೂರು ವಿಭಾಗ, ಮೈಸೂರು.

DIPR/DDMYS/132/KSMCA/111/2026-27

ಬಿಎಸ್‌ಎನ್‌ಎಲ್ ಪಿಂಚಣಿದಾರರ ಪ್ರತಿಭಟನೆ



• **ಕನ್ನಡಪ್ರಭ ವಾರ್ತೆ** ಮೈಸೂರು

ಕೇಂದ್ರ ಸರ್ಕಾರ ಬಿಎಸ್‌ಎನ್‌ಎಲ್ ಪಿಂಚಣಿದಾರರಿಗೆ ಜ.1 ರಿಂದ ಕೊಡಬೇಕಿರುವ ತುಟ್ಟಿ ಭತ್ಯೆ ತಡೆ ಹಿಡಿದಿರುವುದನ್ನು ಖಂಡಿಸಿ ಬಿಎಸ್ ಎನ್‌ಎಲ್ ಪಿಂಚಣಿದಾರ ಜಂಟಿ ವೇದಿಕೆಯವರು ನಗರದ ಜಯ ಲಕ್ಷ್ಮಿಪುರಂನಲ್ಲಿರುವ ಬಿಎಸ್‌ಎನ್ ಎಲ್ ಕಚೇರಿ ಮುಂಭಾಗದಲ್ಲಿ ಇತ್ತೀಚೆಗೆ ಪ್ರತಿಭಟಿಸಿದರು.

ತುಟ್ಟಿ ಭತ್ಯೆ ತಡೆ ಹಿಡಿದಿರುವ ಕ್ರಮ ನಿರಾಧಾರ, ಅರ್ಥಹೀನ ಮತ್ತು ಅಸಂಬದ್ಧ. ಡಿಒಟಿ ಸೇವೆಯಿಂದ ಬಿಎಸ್‌ಎನ್‌ಎಲ್‌ಗೆ ಅಭಿಯುಕ್ತಿಗೊಂಡ ನೌಕರರನ್ನು ನಿವೃತ್ತಿಯ ನಂತರ ಕೇಂದ್ರ ಸರ್ಕಾರದ ಪಿಂಚಣಿ ದಾರರೆಂದು ಪರಿಗಣಿಸುವು ದಾಗಿ ಬಿಎಸ್ ಎನ್‌ಎಲ್ ಸ್ಥಾಪನೆಯಾದ ವರ್ಷದ (2000) ಕ್ಯಾಬಿನೆಟ್ ಸಭೆಯಲ್ಲಿ ತೀರ್ಮಾನವಾಗಿದೆ. ಅವರ ಪಿಂಚಣಿ ಮತ್ತು ತುಟ್ಟಿ ಭತ್ಯೆಯನ್ನು ನೌಕರರು ಸೇವೆಯಲ್ಲಿದ್ದಾಗ ವಂತಿಗೆ ರೂಪದಲ್ಲಿ ಕೊಟ್ಟಿರುವ ಸಂಚಿತ ನಿಧಿಯಿಂದ ಕೊಡಲ್ಪಡುತ್ತದೆಯೇ ಹೊರತು ಯಾವುದೇ ಕೇಂದ್ರ ಸರ್ಕಾರಿ ಸ್ವಾಮ್ಯದ ಸಾರ್ವಜನಿಕ ಉದ್ದಿಮೆಯಿಂದ ಪಿಂಚಣಿ ಕೊಡುವುದಿಲ್ಲ ಎಂದು ಅವರು ತಿಳಿಸಿದರು. ಹೀಗಾಗಿ ಬಿಎಸ್‌ಎನ್ ಎಲ್ ಸಂಸ್ಥೆಯ ಲಾಭ- ನಷ್ಟದ ಆಧಾರದ ಮೇಲೆ ಪಿಂಚಣಿದಾರರ ತುಟ್ಟಿ ಭತ್ಯೆ ತಡೆಹಿಡಿಯುವುದು ಅನೈತಿಕ ಮತ್ತು ಅಸಂಬದ್ಧ. ಈ ಕೂಡಲೇ ಬಿಎಸ್‌ಎನ್‌ಎಲ್ ಪಿಂಚಣಿ ದಾರರಿಗೆ ಜ.1 ರಿಂದ ಕೊಡಬೇಕಿರುವ ತುಟ್ಟಿ ಭತ್ಯೆ ನೀಡಬೇಕು ಎಂದು ಅವರು ಒತ್ತಾಯಿಸಿದರು. ವೇದಿಕೆಯ ಪದಾ ಧಿಕಾರಿಗಳಾದ ಎಸ್. ವಿಷಕಂಠ ಮೂರ್ತಿ, ರಾಜಶೇಖರ್, ಬಸವ ರಾಜು ಮೊದಲಾದವರು ಇದ್ದರು.

ಔದ್ಯಮಿಕ ನ್ಯಾಯಾಧೀಕರಣ, ನ್ಯಾಯ ದೇಗುಲ, ಹೆಚ್.ಸಿದ್ದಯ್ಯ ರಸ್ತೆ, ಬೆಂಗಳೂರು–560 027

ಸೂಚನೆ

ಕ್ರಮ ಸಂ.	ಅರ್ಜಿದಾರರು	ಪ್ರತಿವಾದಿ	ಅರ್ಜಿ ಕ್ರಮ ಸಂಖ್ಯೆ	ವಿಚಾರಣೆ ದಿನಾಂಕ
1	ವಿಭಾಗೀಯ ನಿಯಂತ್ರಣಾಧಿಕಾರಿ, ಈಶಾನ್ಯ ವಲಯ, ಬೆಂ.ಮ.ಸಾ.ಸಂಸ್ಥೆ.	ರವಣಪ್ಪ ಆರ್ ವಿ S/o ವೆಂಕಟರಾಮಪ್ಪ, ಜೇಕವಾಂಡ್ಲಪಲ್ಲಿ ಗ್ರಾಮ, ಬಾಗೇಪಲ್ಲಿ ತಾಲ್ಲೂಕು, ಕೋಲಾರ ಜಿಲ್ಲೆ–561 207	SLA No. 395/2025	12.05.2026

ಮೇಲೆ ಹೆಸರಿಸಿರುವ ಅರ್ಜಿದಾರರು ಮೇಲ್ಕಂಡ ಪ್ರತಿವಾದಿಯನ್ನು ಬೆಂ.ಮ.ಸಾ.ಸಂಸ್ಥೆಯ ಸೇವೆಯಿಂದ ವಜಾಗೊಳಿಸಲು ಕೈಗಾರಿಕಾ ವಿವಾದ ಕಾರ್ಮಿಕ ಕಾಯ್ದೆ ಪರಿಚ್ಛೇದ 33 (2) (ಬಿ) ರಡಿಯಲ್ಲಿ ಅನುಮೋದನೆ ಕೋರಿರುತ್ತಾರೆ. ಆದ್ದರಿಂದ ಮೇಲೆ ನಮೂದಿಸಿರುವ ವಿಚಾರಣಾ ದಿನಾಂಕದಂದು ಬೆಳಗ್ಗೆ 11:00 ಗಂಟೆಗೆ ಗೌರವಾನ್ವಿತ ಔದ್ಯಮಿಕ ನ್ಯಾಯಾಲಯ, ಹೆಚ್.ಸಿದ್ದಯ್ಯ ರಸ್ತೆ, ಬೆಂಗಳೂರು– 560 027, ಇಲ್ಲಿ ಹಾಜರಾಗಿ ಪ್ರತಿವಾದಿ ಆಕ್ಷೇಪಣೆಗಳನ್ನು ಸಲ್ಲಿಸಲು ಈ ಮೂಲಕ ಸೂಚಿಸಲಾಗಿದೆ. ತಪ್ಪಿದಲ್ಲಿ ಏಕಪಕ್ಷೀಯವಾಗಿ ಕ್ರಮ ಕೈಗೊಳ್ಳಲಾಗುವುದು.

ಸಹಿ/– (ಶಿರಸ್ತೆದಾರರು), ಔದ್ಯಮಿಕ ನಾಯಾಧೀಕರಣ

ಅಂತರಾಷ್ಟ್ರೀಯ ಪುಷ್ಪ ಹರಾಜು ಬೆಂಗಳೂರು ನಿಯಮಿತ
ನಂ.24, ಬಳ್ಳಾರಿ ರಸ್ತೆ, ಹೆಬ್ಬಾಳ, ಬೆಂಗಳೂರು – 560024, ಫೋನ್ ನಂ. . 8431235858 / 8431235867
ಇ–ಮೇಲ್ : : ifablimited@gmail.com, ವೆಬ್‌ಸೈಟ್ :-www.ifabindia.org

IFAB/2025-26/PM/WORK_INDENT3/CALL-4 Date: 30.04.2026

ಅಂತರಾಷ್ಟ್ರೀಯ ಪುಷ್ಪ ಹರಾಜು ಬೆಂಗಳೂರು ನಿಯಮಿತದ ಬಲವರ್ಧನೆ ಯೋಜನೆಯ ಡಬಲ್ ಡೀಪ್ ರ್‍ಯಾಕಿಂಗ್ ಸಿಸ್ಟಮ್, ಪ್ಯಾಲೆಟ್‌ಗಳು, ಕನ್ವೇಯರ್ ಬೆಲ್ಟ್ ಸಿಸ್ಟಮ್ ಇತ್ಯಾದಿಗಳನ್ನು ಒಳಗೊಂಡಂತೆ ತಾಂತ್ರಿಕ ಉಪಕರಣಗಳ ಪೂರೈಕೆ ಮತ್ತು ಸ್ಥಾಪನೆ ಮತ್ತು ಹೂವಿನ ಶೇಖರಣಾ ಕೋಲ್ಡ್ ರೂಮ್‌ಗಳ ನಿರ್ಮಾಣ ಟೆಂಡರ್ ಪ್ರಕಟಣೆ

IFAB ಲಿಮಿಟೆಡ್ ನಿಂದ ಕರ್ನಾಟಕ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ **https://kppp.karnataka.gov.in** ಮೂಲಕ ಎರಡು ಬಿಡ್ ಸಿಸ್ಟಮ್ ಆನ್‌ಲೈನ್ ಟೆಂಡರ್‌ಗಳನ್ನು ಆಹ್ವಾನಿಸಲಾಗಿದೆ. ಅಂತರಾಷ್ಟ್ರೀಯ ಪುಷ್ಪ ಹರಾಜು ಬೆಂಗಳೂರು ನಿಯಮಿತದಲ್ಲಿ **RIDF** ಅಡಿಯಲ್ಲಿ ಡಬಲ್ ಡೀಪ್ ರ್‍ಯಾಕಿಂಗ್ ಸಿಸ್ಟಮ್, ಪ್ಯಾಲೆಟ್‌ಗಳು, ಕನ್ವೇಯರ್ ಬೆಲ್ಟ್ ಸಿಸ್ಟಮ್, ಇತ್ಯಾದಿ ಸೇರಿದಂತೆ ತಾಂತ್ರಿಕ ಉಪಕರಣಗಳ ಪೂರೈಕೆ ಮತ್ತು ಸ್ಥಾಪನೆ ಹಾಗೂ ಹೂವಿನ ಸಂಗ್ರಹಣೆ ಕೋಲ್ಡ್ ರೂಮ್‌ಗಳ ನಿರ್ಮಾಣ **(IFAB/2025-26/PM /WORK_INDENT3/CALL-4)**ಕ್ಕಾಗಿ **ದಿ: 30.04.2026** ರಂದು ಟೆಂಡರ್ ಆಹ್ವಾನಿಸಲಾಗಿರುತ್ತದೆ. ಟೆಂಡರ್ ವಿವರ ಮತ್ತು ದಾಖಲೆಗಳು ಕರ್ನಾಟಕ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ಮಾತ್ರ ದಿನಾಂಕ: **30.04.2026** ರಿಂದ ಲಭ್ಯವಿರುತ್ತದೆ, ಟೆಂಡರ್ ಸಲ್ಲಿಸಲು ಕೊನೆಯ **ದಿನಾಂಕ: 11.05.2026 ರ ಸಂಜೆ 4.00 ಗಂಟೆ** ಆಗಿರುತ್ತದೆ.
ದಯವಿಟ್ಟು ಗಮನಿಸಿ, ಪೋರ್ಟಲ್‌ನಲ್ಲಿ ಅಪ್‌ಲೋಡ್ ಮಾಡಲಾದ ಟೆಂಡರ್ ದಾಖಲೆಯಲ್ಲಿ ಕೊನೆಯ ದಿನಾಂಕ ವ್ಯತ್ಯಾಸವಾಗಿ ಕೈತಪ್ಪಿನಿಂದ 23.04.2026 ಎಂದು ನಮೂದಿಸಲಾಗಿದೆ. ಅದನ್ನು **11.05.2026** ಎಂದು ಓದಿಕೊಳ್ಳಲು ವಿನಂತಿಸಲಾಗಿದೆ.

ವಾ.ಸಾ.ಸಂ.ಇ/ವಾಪ್ರ/480/ಶಿರಡಿ ಸಾಯಿ/2026–27

ಸಹಿ/–
ವ್ಯವಸ್ಥಾಪಕ ನಿರ್ದೇಶಕರು